ಸಂಪುಟ 01 | ಸಂಚಿಕೆ 133 | ಭಾನುವಾರ 19 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಐಸ್ ಕ್ರೀಮ್ ದಿನ (National Ice Cream Day)

ಜುಲೈ ತಿಂಗಳ ಮೂರನೇ ಭಾನುವಾರ ಆಚರಿಸಲಾಗುವ ಈ ದಿನವು ಐಸ್ ಕ್ರೀಮ್‌ನ ವಿವಿಧ ರುಚಿಗಳನ್ನು ಸವಿಯಲು ಮತ್ತು ಕುಟುಂಬ-ಸ್ನೇಹಿತರೊಂದಿಗೆ ಸಂತೋಷ ಹಂಚಿಕೊಳ್ಳಲು ಪ್ರೇರೇಪಿಸುತ್ತದೆ. 2026ರಲ್ಲಿ ಇದು ಜುಲೈ 19ರಂದು ಬರುತ್ತದೆ.

2) ಫ್ಲೈಟ್ ಅಟೆಂಡೆಂಟ್ ಸುರಕ್ಷತಾ ವೃತ್ತಿಪರರ ದಿನ (Flight Attendant Safety Professionals' Day)

ವಿಮಾನ ಪ್ರಯಾಣಿಕರ ಸುರಕ್ಷತೆ ಮತ್ತು ಸೇವೆಯಲ್ಲಿ ಪ್ರಮುಖ ಪಾತ್ರ ವಹಿಸುವ ಫ್ಲೈಟ್ ಅಟೆಂಡೆಂಟ್‌ಗಳಿಗೆ ಗೌರವ ಸಲ್ಲಿಸುವ

## ಸುಭಾಷಿತ

ಸೋಲು ಎಂಬ ರೋಗವನ್ನು ನಾಶ ಮಾಡಲು, ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮವೇ ಉತ್ತಮವಾದ ಮದ್ದು.

-ಎ.ಪಿ.ಜೆ. ಅಬ್ದುಲ್ ಕಲಾಂ

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.


## ಸನ್ ರೈಸ್ ಕಾಲೇಜಿನ ಶನಿವಾರದ ವಿಶೇಷ ಉಪನ್ಯಾಸ ನೀಡಿದ ಡಾ. ಸವಿತಾ.ಎನ್.ಮಾಲಿಪಾಟೀಲ್

❑ ನೈಜ್ಯ ದೇಸೆ ನ್ಯೂಸ್

ಸಿಂಧನೂರು: ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು, ಸಿಂಧನೂರು ವತಿಯಿಂದ ಪ್ರತೀ ಶನಿವಾರದಂತೆ ಆಯೋಜಿಸಲಾಗುವ ವಿಶೇಷ ಶನಿವಾರದ ಶೈಕ್ಷಣಿಕ ಉಪನ್ಯಾಸ ಕಾರ್ಯಕ್ರಮವು ಈ ಶನಿವಾರವೂ ಅರ್ಥಪೂರ್ಣವಾಗಿ ನಡೆಯಿತು.






ಕಾರ್ಯಕ್ರಮದಲ್ಲಿ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳಿಗೆ ಚೇತನ್ ಆಸ್ಪತ್ರೆ, ಸಿಂಧನೂರಿನ ಖ್ಯಾತ ಮಕ್ಕಳ ತಜ್ಞರು ಹಾಗೂ ನವಜಾತ ಶಿಶು ತಜ್ಞರಾದ ಡಾ. ಸವಿತಾ ಎನ್. ಮಾಲಿಪಾಟೀಲ್ (MBBS, MRCPCH (U.K., England), Consultant Paediatrician & Neonatology Children's Specialist) ಅವರು ಮುಖ್ಯ ಅತಿಥಿ-ಯಾಗಿ ಆಗಮಿಸಿ "ನವಜಾತ ಶಿಶುವಿನ ಆರೋಗ್ಯ ಮೌಲ್ಯಮಾಪನ" ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.ತಮ್ಮ ಉಪನ್ಯಾಸದಲ್ಲಿ ಡಾ. ಸವಿತಾ ಎನ್. ಮಾಲಿಪಾಟೀಲ್ ಅವರು ನವಜಾತ ಶಿಶುವಿನ ಜನನದ ಮೊದಲ ಕ್ಷಣಗಳಿಂದಲೇ ಸರಿಯಾದ ಆರೋಗ್ಯ ಮೌಲ್ಯಮಾಪನ ಮಾಡುವುದು ಅತ್ಯಂತ ಮಹತ್ವದ್ದಾಗಿದೆ ಎಂದು ತಿಳಿಸಿದರು. ಶಿಶುವಿನ ದೇಹದ ಉಷ್ಣತೆ, ಉಸಿರಾಟದ ವೇಗ, ಹೃದಯ ಬಡಿತ, ಚರ್ಮದ ಬಣ್ಣ, ಪ್ರತಿಕ್ರಿಯೆಗಳು, ತೂಕ, ಎತ್ತರ, ತಲೆಯ ಸುತ್ತಳತೆ ಸೇರಿದಂತೆ ಪ್ರತಿಯೊಂದು ಅಂಶವನ್ನು ನಿಖರವಾಗಿ ಪರಿಶೀಲಿಸುವುದು ನರ್ಸಿಂಗ್ ಸಿಬ್ಬಂದಿಯ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ನವಜಾತ ಶಿಶುವಿನ ಆರೋಗ್ಯವನ್ನು ಮೌಲ್ಯಮಾಪನ ಮಾಡುವಲ್ಲಿ ಂಕಉಂಖ ಖಿಛಿಂಡಿಜ ನ ಮಹತ್ವವನ್ನು ವಿವರಿಸಿ, ಜನನದ ಮೊದಲ ನಿಮಿಷ ಮತ್ತು ಐದನೇ ನಿಮಿಷದಲ್ಲಿ ಶಿಶುವಿನ ಸ್ಥಿತಿಯನ್ನು ಪರಿಶೀಲಿಸುವ ವಿಧಾನವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು. ಶಿಶುವಿನಲ್ಲಿ ಕಂಡುಬರುವ ಯಾವುದೇ ಅಸಹಜ ಲಕ್ಷಣಗಳನ್ನು ಆರಂಭದಲ್ಲಿಯೇ ಗುರುತಿಸಿ ಸೂಕ್ತ ಚಿಕಿತ್ಸೆ ನೀಡಿದರೆ ಅನೇಕ ಆರೋಗ್ಯ ಸಮಸ್ಯೆಗಳನ್ನು ತಡೆಯಬಹುದು ಎಂದು ಹೇಳಿದರು.ನವಜಾತ ಶಿಶುವಿಗೆ ತಾಯಿಯ ಮೊದಲ ಹಾಲಿನ ಮಹತ್ವ, ಸೋಂಕುಗಳಿಂದ ರಕ್ಷಣೆ, ದೇಹದ ಉಷ್ಣಾಂಶ ಕಾಪಾಡುವುದು, ಸ್ವಚ್ಛತೆ, ಲಸಿಕೆಗಳ ಅಗತ್ಯತೆ, ತಾಯಿಗೆ ನೀಡಬೇಕಾದ ಸಲಹೆಗಳು ಹಾಗೂ ತುರ್ತು ಪರಿಸ್ಥಿತಿಯಲ್ಲಿ ನರ್ಸಿಂಗ್ ಸಿಬ್ಬಂದಿಯ ಜವಾಬ್ದಾ-ರಿಗಳ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು.

ನರ್ಸಿಂಗ್ ವಿದ್ಯಾರ್ಥಿಗಳು ಕೇವಲ ಪಠ್ಯಜ್ಞಾನಕ್ಕೆ ಸೀಮಿತರಾಗದೆ, ಪ್ರಾಯೋಗಿಕ ಅನುಭವ, ಸೇವಾ ಮನೋಭಾವ, ಸಮಯಪ್ರಜ್ಞೆ, ಮಾನವೀಯತೆ ಮತ್ತು ರೋಗಿಗಳೊಂದಿಗೆ ಉತ್ತಮ ಸಂವಹನ ಕೌಶಲ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಇಂದಿನ ಆರೋಗ್ಯ ಕ್ಷೇತ್ರದಲ್ಲಿ ನರ್ಸಿಂಗ್ ವೃತ್ತಿಗೆ ಅಪಾರ ಗೌರವವಿದ್ದು, ನರ್ಸಿಂಗ್ ವಿದ್ಯಾರ್ಥಿಗಳು ತಮ್ಮ ವೃತ್ತಿಯನ್ನು ಸೇವಾ ಧರ್ಮವೆಂದು ಪರಿಗಣಿಸಿ ಪ್ರಾಮಾಣಿಕತೆ, ಶಿಸ್ತು ಮತ್ತು ಸಮರ್ಪಣಾ ಮನೋಭಾವದಿಂದ ಕಾರ್ಯನಿರ್ವಹಿಸಿದರೆ ಸಮಾಜದಲ್ಲಿ ಉತ್ತಮ ಆರೋಗ್ಯ ಸೇವೆಯನ್ನು ನೀಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.ವಿದ್ಯಾರ್ಥಿಗಳು ನಿರಂತರವಾಗಿ ಹೊಸ ವೈದ್ಯಕೀಯ ಜ್ಞಾನವನ್ನು ಪಡೆದುಕೊಳ್ಳುತ್ತಾ ತಮ್ಮ ಕೌಶಲ್ಯವನ್ನು ವೃದ್ಧಿಸಿಕೊಳ್ಳಬೇಕು ಎಂದು ಪ್ರೇರಣಾದಾಯಕ ಸಂದೇಶ ನೀಡಿದರು. ಕಾರ್ಯಕ್ರಮದಲ್ಲಿ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು ಮಾತನಾಡಿ, ನವಜಾತ ಶಿಶುವಿನ ಆರೈಕೆ ಹಾಗೂ ಆರೋಗ್ಯ ಮೌಲ್ಯಮಾಪನವು ನರ್ಸಿಂಗ್ ಶಿಕ್ಷಣದ ಅತ್ಯಂತ ಪ್ರಮುಖ ಭಾಗವಾಗಿದೆ.

ವಿದ್ಯಾರ್ಥಿಗಳು ಪ್ರತಿಯೊಬ್ಬ ನವಜಾತ ಶಿಶುವಿನ ಆರೋಗ್ಯ ಸ್ಥಿತಿಯನ್ನು ವೈಜ್ಞಾನಿಕ ರೀತಿಯಲ್ಲಿ ಪರಿಶೀಲಿಸಿ, ತಕ್ಷಣದ ಆರೈಕೆಯನ್ನು ನೀಡುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು. ಇಂತಹ ತಜ್ಞ ವೈದ್ಯರ ಉಪನ್ಯಾಸಗಳು ವಿದ್ಯಾರ್ಥಿಗಳ ಜ್ಞಾನ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದರು.ಉಪನ್ಯಾಸದ ನಂತರ ವಿದ್ಯಾರ್ಥಿಗಳು ಕೇಳಿದ ವಿವಿಧ ಪ್ರಶ್ನೆಗಳಿಗೆ ಡಾ. ಸವಿತಾ ಎನ್. ಮಾಲಿಪಾಟೀಲ್ ಅವರು ಸಮಗ್ರವಾಗಿ ಉತ್ತರಿಸಿ, ನವಜಾತ ಶಿಶುಗಳ ಆರೈಕೆ, ತುರ್ತು ಚಿಕಿತ್ಸೆ, ಸಾಮಾನ್ಯವಾಗಿ ಕಂಡುಬರುವ ಆರೋಗ್ಯ ಸಮಸ್ಯೆಗಳು ಹಾಗೂ ಅವುಗಳ ನಿರ್ವಹಣೆ ಕುರಿತು ವಿದ್ಯಾರ್ಥಿಗಳ ಸಂದೇಹಗಳನ್ನು ನಿವಾರಿಸಿದರು.ಕಾರ್ಯಕ್ರಮದ ಕೊನೆಯಲ್ಲಿ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ, ಕಾರ್ಯದರ್ಶಿಯಾದ ಇರ್ಷಾದ್ ಕೆ, ಎಲ್ಲಾ ವಿಭಾಗಗಳ ಪ್ರಾಚಾರ್ಯರು ಹಾಗೂ ಉಪನ್ಯಾಸಕರ ಪರವಾಗಿ ನವಜಾತ ಶಿಶುವಿನ ಆರೋಗ್ಯ ಮೌಲ್ಯಮಾಪನದ ಕುರಿತು ಅತ್ಯಂತ ಉಪಯುಕ್ತ ಹಾಗೂ ಪ್ರೇರಣಾದಾಯಕ ಉಪನ್ಯಾಸ ನೀಡಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದ ಡಾ. ಸವಿತಾ ಎನ್. ಮಾಲಿಪಾಟೀಲ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಲಾಯಿತು. ಇದೇ ರೀತಿ ಮುಂದಿನ ದಿನಗಳಲ್ಲಿಯೂ ವಿದ್ಯಾರ್ಥಿಗಳ ವೃತ್ತಿಪರ ಕೌಶಲ್ಯ ಮತ್ತು ಜ್ಞಾನವನ್ನು ವೃದ್ಧಿಸುವ ಉದ್ದೇಶದಿಂದ ವಿವಿಧ ಕ್ಷೇತ್ರಗಳ ಪರಿಣಿತರಿಂದ ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗುವುದು ಎಂದು ಸಂಸ್ಥೆ ತಿಳಿಸಿತು.

## "ಮಾನ್ವಿ ಶಿಶು ಅಭಿರುದ್ಧಿ ಯೋಜನಾಧಿಕಾರಿ ಅಮಾನತ್ತು"

### ಅಂಗನವಾಡಿ ನೇಮಕಾತಿಯಲ್ಲಿ ಎಸೆಗಿರುವ ಭ್ರಷ್ಟಾಚಾರ ಆರೋಪ ಸಾಬೀತು ಸಿಡಿಪಿಓ ಶಿವಗಂಗಮ್ಮ ಅಮಾನತ್ತಾಗಿದೆ.

❑ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ನೇಮಕಾತಿಯಲ್ಲಿ ಭ್ರಷ್ಟಾಚಾರ ಎಸೆಗಿರುವ ಆರೋಪ ಸಾಬೀತುಗೊಂಡ ಹಿನ್ನೆಲೆಯಲ್ಲಿ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಿವಗಂಗಮ್ಮ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಸಚಿವಾಲಯದ ಸರ್ಕಾರದ 2ನೇ ಅಧೀನ ಕಾರ್ಯದರ್ಶಿಗಳಾದ ರಶ್ಮಿ ಎಂ.ಎಸ್ ಅವರು ಆದೇಶ ಹೊರಡಿಸಿದ್ದಾರೆ.**



ತಾಲೂಕಿನ ಬಾಬಾನಾಯಕ ಕಾಲೋನಿ, ಯರಮಲದೊಡ್ಡಿ ಹಾಗೂ ಉಮಳಿ ಹೊಸೂರು-2 ಅಂಗನವಾಡಿ ಕೇಂದ್ರಗಳ ಸಹಾಯಕಿ ಹಾಗೂ ಕಾರ್ಯಕರ್ತೆಯರ ನೇಮಕಾತಿಯಲ್ಲಿ ಭ್ರಷ್ಟಾಚಾರ ಎಸೆಗಿರುವ ಪ್ರಕರಣಕ್ಕೆ ಸಂಬಂಧಿಸಿ ಇಲಾಖೆಯು ತನಿಖಾ ತಂಡವನ್ನು ರಚಿಸಲಾಗಿತ್ತು. ಮಾನ್ವಿ ತಾಲೂಕಿನ ಬಾಬಾನಾಯಕ ಕಾಲೋನಿ, ಯರಮಲದೊಡ್ಡಿ ಮತ್ತು ಉಮಳಿ ಹೊಸೂರು-2 ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆ/ಸಹಾಯಕಿಯರ ನೇಮಕಾತಿಯಲ್ಲಿ ಭ್ರಷ್ಟಾಚಾರದ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲಾಖೆಯ ಅಧಿಕಾರಿಗಳು ತನಿಖೆ ನಡೆಸಿ ಸಲ್ಲಿಸಿರುವ ಪ್ರಾಥಮಿಕ ವರದಿಯನ್ನಾಧಾರಿಸಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರಾಯಚೂರು ಮತ್ತು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅವರ ಅಭಿಪ್ರಾಯದನ್ವಯ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದ-ರಿಂದ ಅವರಿಗೆ ವಹಿಸಿರುವ ಕರ್ತವ್ಯಗಳ ನಿರ್ವಹಣೆ ಸಂದರ್ಭದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿರುವುದು ತನಿಖಾ ತಂಡದ ವರದಿಯಿಂದ ಮೇಲ್ನೋಟಕ್ಕೆ ಸಾಬಿತುಗೊಂಡಿರುತ್ತದೆ. ಈ ಅಧಿಕಾರಿಯು ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕೇಂದ್ರ ಸ್ಥಾನ ಬಿಡುವಂತಿಲ್ಲ ಹಾಗೂ ಇಲಾಖೆಯ ವಿಚಾರಣೆ ಮುಂದುವರೆಸಲಾಗಿದೆ ಎಂದು ಮಹಿಳೆಯರ ಮತ್ತು ಮಕ್ಕಳ ಹಾಗೂ ಅಭಿವೃದ್ಧಿ ಹಾಗೂ ವಿಕಲಚೇತನರ ಹಿರಿಯ ನಾಗರೀಕರ ಸಬಲೀಕರಣ ಸಚಿವಾಲಯ ಸರ್ಕಾರದ 2ನೇ ಅಧೀನ ಕಾರ್ಯದರ್ಶಿಗಳು ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ರಾಜಿ ಅರ್ಜಿ ಸಲ್ಲಿಸಲು ಲಂಚ: ಎಪಿಪಿ ಲೋಕಾಯುಕ್ತ ಬಲೆಗೆ

❑ ನೈಜ್ಯ ದೇಸೆ ನ್ಯೂಸ್

**ಕಲಬುರಗಿ : ನ್ಯಾಯಾಲಯದಲ್ಲಿ ರಾಜಿ ಅರ್ಜಿ ಸಲ್ಲಿಸುವ ಸಂಬಂಧ 10,000 ಲಂಚ ಪಡೆಯುತ್ತಿದ್ದ ವೇಳೆ ಕಲಬುರಗಿಯ 5ನೇ ಜೆಎಂಎಫ್‌ಸಿ ನ್ಯಾಯಾಲಯದ ಹೆಚ್ಚುವರಿ ಸರ್ಕಾರಿ ಅಭಿಯೋಜಕ (ಎಪಿಪಿ) ಸಂತೋಷ್ ಕುಮಾರ್ ಲೋಕಂಡೆ ಅವರನ್ನು ಕರ್ನಾಟಕ ಲೋಕಾಯುಕ್ತ ಪೊಲೀಸರು ಶುಕ್ರವಾರ ಬಲೆಗೆ ಬೀಳಿಸಿ ಬಂಧಿಸಿದ್ದಾರೆ.**



ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ದರಾಜು ಸಿ. ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ, ಲೋಕಾಯುಕ್ತ ಪೊಲೀಸ್ ಇನ್ಸ್ಪೆಕ್ಟರ್ ಅರುಣ್ ಕುಮಾರ್ ನೇತೃತ್ವದ ತಂಡ ನ್ಯಾಯಾಲಯ ಸಂಕೀರ್ಣದ ಸಮೀಪ ಆರೋಪಿಯನ್ನು ಲಂಚದ ಹಣ ಸ್ವೀಕ-ರಿಸುತ್ತಿದ್ದ ವೇಳೆ ವಶಕ್ಕೆ ಪಡೆದುಕೊಂಡಿತು. ದೂರುದಾರ ರಾಹುಲ್ (ಹೈದರಾಬಾದ್) ಅವರು ನೀಡಿದ ದೂರಿನ ಮೇರೆಗೆ ಈ ಕಾರ್ಯಾಚರಣೆ ನಡೆಸಲಾಗಿದೆ.

ನ್ಯಾಯಾಲಯಕ್ಕೆ ರಾಜಿ ಅರ್ಜಿ ಸಲ್ಲಿಸುವ ಕೆಲಸ ಬಾಕಿ ಇರುವುದಾಗಿ ಹೇಳಿ ಆರೋಪಿ ?10,000 ನಗದು ಜೊತೆಗೆ 9 ಸೀರೆಗಳು, 4 ಶರ್ಟ್‌ಗಳು, 4 ಜೀನ್ಸ್ ಪ್ಯಾಂಟ್‌ಗಳು, ಒಂದು ಜೋಡಿ ಶೂ, 4 ಮಹಿಳೆಯರ ಉಡುಪುಗಳು ಹಾಗೂ 6 ಜೋಡಿ ಮಹಿಳೆಯರ ಚಪ್ಪಲಿಗಳನ್ನು ಬೇಡಿಕೆ ಇಟ್ಟಿದ್ದಾನೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಅಧಿಕಾರಿಗಳು ಬಲೆ ಬೀಸಿ, 10,000 ಲಂಚ ಸ್ವೀಕರಿಸುವ ವೇಳೆ ಆರೋಪಿಯನ್ನು ರೆಡ್‌ಹ್ಯಾಂಡ್ ಆಗಿ ಹಿಡಿದು ಬಂಧಿಸಿದರು. ಈ ಸಂಬಂಧ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ತಜ್ಞ ವೈದ್ಯರ ನೇಮಕಕ್ಕೆ ಕರವೇ ಸ್ವಾಭಿಮಾನಿ ಸೇನೆ ಒತ್ತಾಯ

❑ ನೈಜ್ಯ ದೇಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಿವಿ, ಮೂಗು, ಗಂಟಲು (ಇ ಎನ್ ಟಿ ) ಹಾಗೂ ಚರ್ಮ ರೋಗಗಳಿಗೆ ಸಂಬಂಧಿಸಿದ ತಜ್ಞ ವೈದ್ಯರ ಕೊರತೆ ಯಿಂದಾಗಿ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಆದಷ್ಟು ಬೇಗನೆ ತಜ್ಞ ವೈದ್ಯರನ್ನು ನೇಮಕ ಮಾಡುವಂತೆ ಕರವೇ ಸ್ವಾಭಿಮಾನಿ ಸೇನೆಯ ಅಧ್ಯಕ್ಷ ಜಿಲಾನಿ ಪಾಶ ತಾಲೂಕು ಆರೋಗ್ಯಾಧಿಕಾ-ರಿಗಳಮೂಲಕ ಜಿಲ್ಲಾ ಆರೋಗ್ಯಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ ನಂತರ ಮಾತನಾಡಿದ ಅವರು**




ಸರಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಅವಲಂಬಿಸಿರುವ ಬಡವರು, ಗ್ರಾಮೀಣ ಪ್ರದೇಶದ ಜನರು ಸಣ್ಣಪುಟ್ಟ ಕಾಯಿಲೆಗಳಿಗೂ ಖಾಸಗಿ ಆಸ್ಪತ್ರೆಗಳಿಗೆ ತೆರಳಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ವಿಶೇಷವಾಗಿ ಕಿವಿ ನೋವು, ಕಿವಿ ಕೇಳಿಸದಿರುವುದು, ಗಂಟಲು ಸಮಸ್ಯೆಗಳು, ಮೂಗಿನ ತೊಂದರೆಗಳು ಹಾಗೂ ವಿವಿಧ ಚರ್ಮ ರೋಗಗಳಿಗೆ ಸೂಕ್ತ ತಪಾಸಣೆ ಮತ್ತು ಚಿಕಿತ್ಸೆ ದೊರೆಯದೆ ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ನೇಮಕವಾದಲ್ಲಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ಉತ್ತಮ ಆರೋಗ್ಯ ಸೇವೆ ದೊರೆಯಲಿದೆ. ಅಲ್ಲದೆ, ದೂರದ ನಗರಗಳಿಗೆ ತೆರಳುವ ಸಮಯ ಮತ್ತು ಹಣದ ವ್ಯಯವೂ ತಪ್ಪಲಿದೆ. ಆದ್ದರಿಂದ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಿವಿ, ಮೂಗು, ಗಂಟಲು (ಇ ಎನ್ ಟಿ ) ತಜ್ಞ ವೈದ್ಯರು ಹಾಗೂ ಚರ್ಮ ರೋಗ ತಜ್ಞ ವೈದ್ಯರನ್ನು ಶೀಘ್ರವಾಗಿ ನೇಮಕ ಮಾಡಿ, ಪ್ರತಿದಿನ ಅಥವಾ ನಿಗದಿತ ದಿನಗಳಲ್ಲಿ ಸೇವೆ ನೀಡುವಂತೆ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯರು ಪ್ರತಿದಿನ ಮಧ್ಯಾಹ್ನದ ನಂತರ ಕೆಲಸಕ್ಕೆ ಹಾಜರಾಗುತ್ತಿಲ್ಲ.

ಇದರಿಂದ ದೂರದ ಗ್ರಾಮಗಳಿಂದ ಬರುವ ರೋಗಿಗಳು ಹಾಗೂ ವೃದ್ಧರು, ಮಹಿಳೆಯರು, ಮಕ್ಕಳು ಸೇರಿದಂತೆ ಅನೇಕರು ತೊಂದರೆ ಅನುಭವಿಸುತ್ತಿದ್ದಾರೆ. ತಜ್ಞ ವೈದ್ಯ-ರಿಗಾಗಿ ಬೆಳಗಿನ ಸಮಯದಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ಆಗಮಿಸುವುದ-ರಿಂದ ಹೆಚ್ಚಿನ ಜನದಟ್ಟಣೆ ಉಂಟಾಗುತ್ತಿದೆ. ಮಧ್ಯಾಹ್ನ ಸಮಯದಲ್ಲಿ ವೈದ್ಯರು ಲಭ್ಯವಿಲ್ಲದ ಕಾರಣ ಅನೇಕ ರೋಗಿಗಳು ಚಿಕಿತ್ಸೆ ಪಡೆಯದೆ ಹಿಂದಿರುಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ನಿರಂತರ ಹಾಗೂ ಸಮರ್ಪಕ ಆರೋಗ್ಯ ಸೇವೆ ದೊರೆಯಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಆದ-ರಿಂದ ಸಂಬಂಧಪಟ್ಟ ತಜ್ಞ ವೈದ್ಯರು ನಿಗದಿತ ವೇಳಾ ಪಟ್ಟಿಯಂತೆ ಮಧ್ಯಾಹ್ನ ಸಮಯದಲ್ಲಿಯೂ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕು.

ಅಲ್ಲದೆ ಆಸ್ಪತ್ರೆಯ ವೈದ್ಯರ ಹಾಜರಾತಿ ಹಾಗೂ ಸೇವಾ ವೇಳಾ ಪಟ್ಟಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚನೆ ನೀಡಬೇಕು ಹಾಗೂ ತಜ್ಞ ವೈದ್ಯರನ್ನು ನೇಮಕ ಮಾಡಬೇಕು ಈ ನಮ್ಮ ಮನವಿಗೆ ಸ್ಪಂದಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಅನಿರ್ಧಿಷ್ಟಾವಧಿ ಧರಣಿಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಒತ್ತಾಯಿಸಿದರು .ಈ ಸಂದರ್ಭದಲ್ಲಿ ಮಹಮ್ಮದ್ ಅಜ್ಮಿರ್ , ರವಿಕುಮಾರ್ ಬರಗುಡಿ , ಮೊಶಿನ್ ಖಾನ್ , ಜಮೀರ್ ಖಾನ್ , ಅಲ್ಲವುದ್ದೀನ್ ಖಾನ್ , ಮರಿಯಪ್ಪ ನಗನೂರ್ , ಆಜೀಜ್ ಪಾಶ , ಬಸನಗೌಡ ಮಲ್ಲನಗೌಡ , ಇಲಿಯಾಸ್ , ಶಬ್ಬೀರ್ ಪುಲ್ವಲೆ ,ತಿಮ್ಮನಗೌಡ , ನನ್ನಸಾಬ್ , ರೆಹೇಮನ್ , ವೀರೇಶ್ ಐದನಾಳ್ , ಪರಮಣ್ಣ ಐದನಾಲ್ ಸೇರಿದಂತೆ ಇತರರು ಇದ್ದರು .

## ಸಾಹಿತ್ಯ ಸಿಂಚನ

### ಪ್ರಾರ್ಥನೆ

ಪ್ರಾರ್ಥನೆ ಮನದಾಳದ ಪವಿತ್ರ ನಾದ,
ಜೀವನದ ದಾರಿಗೆ ಬೆಳಕಿನ ಬೀಜ.
ದೇವರ ಸನ್ನಿಧಿಯ ದಿವ್ಯ ಅನುಭವ,
ಭಕ್ತಿಯ ಹೃದಯದ ಅಮೃತ ಸ್ವರ.

ಕೈಮುಗಿದು ಕೇಳುವ ನಿಶ್ಯಬ್ದ ಮಾತು,
ಆತ್ಮಕ್ಕೆ ನೀಡುವ ನೆಮ್ಮದಿಯ ದಾರಿ.
ಕಷ್ಟದ ಸಮಯದ ಧೈರ್ಯದ ಶಕ್ತಿ,
ಸಂತಸದ ಕ್ಷಣದ ಕೃತಜ್ಞತೆಯ ಭಾವ.

ಪ್ರಾರ್ಥನೆ ಎಂದರೆ ಪ್ರೀತಿಯ ಭಾಷೆ,
ಮಾನವತೆಯ ದೀಪ ಬೆಳಗಿಸುವ ಆಶೆ.
ಅಹಂಕಾರ ಕರಗಿ ವಿನಯ ಮೂಡುತ್ತದೆ,
ದ್ವೇಷದ ಬದಲು ಪ್ರೀತಿ ಅರಳುತ್ತದೆ.

ಪ್ರತಿ ಪ್ರಭಾತದ ಹೊಸ ಆರಂಭ,
ಪ್ರಾರ್ಥನೆಯಿಂದ ಸಿಗುವುದು ಶುಭ ಸಂದೇಶ.
ಸತ್ಯದ ಹಾದಿಯಲ್ಲಿ ನಡೆಯುವ ಬಲ,
ಒಳ್ಳೆಯತನದ ಬದುಕಿನ ಫಲ.

ನಂಬಿಕೆ, ಭಕ್ತಿ, ಸೇವೆಯ ಸಂಗಮ,
ಪ್ರಾರ್ಥನೆಯೇ ಬದುಕಿನ ನಿಜ ಧರ್ಮ.
ದೇವರ ಕೃಪೆಯೇ ನಮ್ಮ ಬಲವಾಗಲಿ,
ಎಲ್ಲರ ಜೀವನ ಸುಖ-ಶಾಂತಿಯಿಂದ ತುಂಬಿರಲಿ.

-ಶ್ರೀಮತಿ ಕವಿತಾ ಹಿರೇಮಠ್

## ಅಂಜುಮನ್-ಎ-ಮುಸ್ಲಿಮೀನ್ ಸಂತೆಕೆಲ್ಲೂರು ಶಾಖೆಯ ನೂತನ ಸಮಿತಿ ರಚನೆ: ಸರ್ವಾನುಮತದಿಂದ ಪದಾಧಿಕಾರಿಗಳ ಆಯ್ಕೆ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿಯ ಮಾರ್ಗದರ್ಶನದಲ್ಲಿ ಸಂತೆಕೆಲ್ಲೂರು ಗ್ರಾಮದಲ್ಲಿ ನಡೆದ ಸಭೆಯಲ್ಲಿ ಅಂಜುಮನ್-ಎ-ಮುಸ್ಲಿಮೀನ್ ಸಂತೆಕೆಲ್ಲೂರು ಕಮಿಟಿಯ ಗೌರವಧ್ಯಕ್ಷರಾಗಿ ಅಲ್ಲಾಸಾಬ್, ಅಧ್ಯಕ್ಷರಾಗಿ ಇಬ್ರಾಹಿಂ,

ಉಪಾಧ್ಯಕ್ಷರಾಗಿ ಶಮಿಮ್ ಪಾಷಾ, ಇನ್ನೊರ್ವ ಉಪಾಧ್ಯಕ್ಷರಾಗಿ ಮಹೇಬೂಬ್ ನಾಲತವಾಡ, ಪ್ರಧಾನ ಕಾರ್ಯದರ್ಶಿಯಾಗಿ ಎಮ್.ಡಿ ನವಾಜ್, ಖಜಾಂಚಿಯಾಗಿ ಎಮ್.ಡಿ ಯೂಸುಫ್, ಕಾರ್ಯದಕ್ಷರಾಗಿ ಮೋಹಿದ್, ಜಂಟಿ ಕಾರ್ಯದರ್ಶಿಯಾಗಿ ಮೌಲಾಲಿ, ಸಹ ಕಾರ್ಯದರ್ಶಿಗಳಾಗಿ ಚಾಂದ್, ಅಬ್ದುಲ್ ಮುದಗಲ್, ಖಲೀಲ್ ನದಾಫ್ ಹಾಗೂ ಸದಸ್ಯರಾಗಿ ಬಕ್ಷು ಮಿಯಾ, ಮಹೇಬೂಬ್ ಮುಲ್ಲಾರ್,



ಮಹೇಬೂಬ್ ಜೆಸಿಬಿ, ರಸೂಲ್ ಕೊಡಿಹಾಳ್, ಖಾನ್ ಸಾಬ್, ರಿಯಾಜ್ ಕೋಟಾ, ದಾವೂದ್ ಲಕಡಿ, ಮೌಲಾಲಿ, ಮಹೇಬೂಬ್ ಆಟೋ, ಪಕೀರ್ ಸಾಬ್, ಬಂದೇನವಾಜ್, ಸಲೀಂ ಕುನ್ನಟಗಿ, ಅಬ್ದುಲ್ ಬಜಾರ್, ನಬಿಸಾಬ್, ಬಕ್ಷು ಪಂಚರ್, ನಬಿಸಾಬ್, ಮಹೇಬೂಬ್ ಕರಡಕಲ್, ಮೊಹಮ್ಮದ್ ಹುಲ್ಲೂರ್ ಇವರನ್ನ ಸಂತೆಕೆಲ್ಲೂರ ಗ್ರಾಮದ ಸಭೆಯಲ್ಲಿ ಹಾಜರಿದ್ದ ಸಮುದಾಯದವರ ಒಮ್ಮತದ ಅಭಿಪ್ರಾಯ ಮೇರೆಗೆ ಆಯ್ಕೆ ಮಾಡಲಾಯಿತು ಹಾಗೂ ಅಂಜುಮನ್-ಎ-ಮುಸ್ಲಿಮೀನ್ ಮುಖ್ಯ ಕಮಿಟಿಗೆ ಸಂತೆಕೆಲ್ಲೂರು ವಿಭಾಗದಿಂದ ಜನಾಬ್ ಆಬಿದ್ ಅಲಿ ಸಾಬ್, ಜನಾಬ್ ಮಕಬುಲ್ ಸಾಬ್, ಜನಾಬ್ ಮೊಹಮ್ಮದ್ ಪಾನ್ ವಾಲೆ, ಜನಾಬ್ ಖಲಿಲ್ ಮುಲ್ಲಾರ್, ಜನಾಬ್ ಖಾಸಿಂ ಸಾಬ್, ಜನಾಬ್ ಹುಸೇನ್ ಭಾಷಾ, ಇವರನ್ನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಆಯ್ಕೆ ಮಾಡಲಾಯಿತು ಈ ಸಂದರ್ಭದಲ್ಲಿ ಅಂಜುಮನ್ ಲಿಂಗಸೂಗೂರ ತಾಲೂಕು ಕಮಿಟಿಯ ಪದಾಧಿಕಾರಿಗಳು & ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂತೆಕೆಲ್ಲೂರ ಗ್ರಾಮದ ಸಮುದಾಯದ ಗುರು ಹಿರಿಯರು ಸಹೋದರರು ಉಪಸ್ಥಿತರಿದ್ದರು

## ಕಂಪ್ಲಿಯಲ್ಲಿ ನಡೆದ ಮೊಣಕಾಲು ಮಂಡಿ ಚಿಪ್ಪು ಮತ್ತು ಚಪ್ಪೆ ಬದಲಾವಣೆಯ ವಿಶೇಷ ಉಚಿತ ತಪಾಸಣಾ ಶಿಬಿರ



❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ/ಕಂಪ್ಲಿ: ಸಮಾಜಮುಖಿ ಕಾರ್ಯಗಳೊಂದಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಡಾ.ಸಂಜೀವ ಎಂ. ಮುದ್ರಿ ಹೇಳಿದರು. ಪಟ್ಟಣದ ಸಾಂಗಾತ್ರಯ ಸಂಸ್ಕೃತ ಪಾಠ ಶಾಲಾ ಆವರಣದಲ್ಲಿ ಅಕ್ಕಮಹಾದೇವಿ ಮಹಿಳಾ ಮಂಡಳಿ, ರಾಣೇಬೆನ್ನೂರು ಲಕ್ಷಿ ಸರ್ಜಿಕಲ್ ಟ್ರಾಮಾ ಅಥೋ ಮಲ್ಟಿಸ್ಪೆಷಟಾಲಿಟಿ ಆಸ್ಪತ್ರೆ(ಡಾ.ಮುದ್ರಿ ಆಸ್ಪತ್ರೆ) ಇವರ ಸಹಯೋದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮೊಣ-ಕಾಲು ಮಂಡಿ ಚಿಪ್ಪು ಮತ್ತು ಚಪ್ಪೆ ಬದಲಾವಣೆ ಆಪರೇಷನ್‌ಗಳಾಗಿ ವಿಶೇಷ ಉಚಿತ ತಪಾಸಣಾ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆರೋಗ್ಯವೂ ಪ್ರತಿಯೊಬ್ಬರ ಜೀವನದಲ್ಲಿ ಅತಿಮುಖ್ಯವಾಗಿದೆ.

ಆದ್ದರಿಂದ ವಯಸ್ಸಾದ ಮನುಷ್ಯರ ಮೊಣಕಾಲು ಮಂಡಿ ಚಿಪ್ಪು ಮತ್ತು ಚಪ್ಪೆ ಬದಲಾವಣೆಗೆ ಸಂಬಂಧಿಸಿಡಂತೆ ಸಕಾಲದಲ್ಲಿ ಚಿಕಿತ್ಸೆ ಪಡೆದುಕೊಂಡು ಉತ್ತಮ ಜೀವನದ ಕಡೆಗೆ ಸಾಗಬೇಕು ಎಂದರು. ನಂತರ ವೀರಶೈವ ಲಿಂಗಾಯತ ಮಹಾ ವೇದಿಕೆ ಜಿಲ್ಲಾಧ್ಯಕ್ಷ ಹೊಸಕೋಟೆ ಜಗದೀಶ ಮಾತನಾಡಿ, ಅಕ್ಕಮಹಾದೇವಿ ಮಹಿಳಾ ಮಂಡಳಿಯವರು ಅನೇಕ ಸಮಾಜಮುಖಿ ಕೆಲಸಗಳನ್ನು ಮಾಡುತ್ತಾ ಬಂದಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.

ಇಲ್ಲಿ ಆರೋಗ್ಯಕ್ಕೆ ಸಂಬಂಧಿಸಿಡಂತೆ ಎಲುಬು, ಕೀಲು ಚಿಕಿತ್ಸೆಗೆಗಾಗಿ ವಿಶೇಷವಾಗಿ ಉಚಿತವಾಗಿ ಶಿಬಿರ ಆಯೋಜನೆ ಮೂಲಕ ಜನರಿಗೆ ಅನುವು ಮಾಡಿಕೊಟ್ಟಿದ್ದಾರೆ. ಇದರ ಸದುಪಯೋಗಪಡಿಸಿಕೊಳ್ಳಬೇಕು. ಅಕ್ಕಮಹಾದೇವಿ ಮಹಿಳಾ ಮಂಡಳಿಯವರು ಗ್ರಾಮೀಣ ಭಾಗದಲ್ಲಿ ಮಹಿಳಾ ಮಂಡಳಿಗಳನ್ನು ರಚಿಸಿ, ಹಳ್ಳಿಗಳಲ್ಲಿ ಸಮಾಜ ಸೇವೆಗೆ ಮುಂದಾಗಬೇಕು ಎಂದರು. ಅಕ್ಕಮಹಾದೇವಿ ಮಹಿಳಾ ಮಂಡಳಿ ಅಧ್ಯಕ್ಷೆ ಡಾ.ಶಾರದ ಜಗನ್ನಾಥ ಹಿರೇಮಠ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಈ ಶಿಬಿರದಿಂದ ಜನತೆಗೆ ಬಹಳಷ್ಟು ಅನುಕೂಲ ಮಾಡಿಕೊಡುವ ಮೂಲಕ ಸಮಾಜಸೇವೆ ಮಾಡಲಾಗುತ್ತಿದೆ ಎಂದರು.

ನಂತರ ದೀರ್ಘ ಕಾಲದ ಮೊಳಕಾಲು ನೋವು, ಚಪ್ಪೆ ನೋವು, ಸೊಂಟ ಸೇರಿದಂತೆ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ಮೂಲಕ ತಪಾಸಣೆ ನಡೆಸಿದರು. ಈ ಸಂದರ್ಭದಲ್ಲಿ ಅಕ್ಕಿ ಗಿರಿಣಿ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ಎಂ. ಹೇಮಯ್ಯಸ್ವಾಮಿ, ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎಂ.ನಾಗರಾಜ, ಅಕ್ಕಮಹಾದೇವಿ ಮಹಿಳಾ ಮಂಡಳಿಯ ಕಾರ್ಯದರ್ಶಿ ಕಾಮಗಂಡಿ ಲಕ್ಷಿ, ಉಪ ಕಾರ್ಯದರ್ಶಿ ಸುಮಂಗಲಾ, ಖಜಾಂಚಿ ಸಿಂಧೂ ಎಸ್.ಚಂದ್ರಶೇಖರಗೌಡ, ಮುಖಂಡರಾದ ವಾಲಿ ಕೊಟ್ರಪ್ಪ, ರುದ್ರಪ್ಪ, ಡಾ.ಜಗನ್ನಾಥ ಹಿರೇಮಠ, ಘನಮಠಶಾಸ್ತ್ರೀ, ಕೆ.ಎಂ.ವಾಗೀಶ್, ಎಸ್.ಡಿ.ಬಸವರಾಜ, ಸುಜಾತ, ಅರವಿ ಅನುಪಮಾ, ಕೋರಿ ಜಯ, ಮುಕ್ಕುಂದಿ ಶಿವಗಂಗಮ್ಮ, ಕೆ.ನಾಗರತ್ನ ಸೇರಿದಂತೆ ಇತರರು ಇದ್ದರು. ವರದಿ: ಜಿಲಾನಸಾಬ್ ಬಡಿಗೇರ್

## ವಿಜಯನಗರ ಶ್ರೀಕೃಷ್ಣದೇವರಾಯವಿಶ್ವವಿದ್ಯಾಲಯದಿಂದ ಸತೀಶ ಇವರಿಗೆ ಪಿಹೆಚ್.ಡಿ. ಪ್ರಧಾನ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪಟ್ಟಣದ ದಿ. ಗಂಗಪ್ಪ ಮತ್ತು ಶ್ರೀಮತಿ. ಸಣ್ಣ ರುದ್ರಮ್ಮ ಇವರ ಮಗನಾದ ಶ್ರೀ.ಸತೀಶ ಇವರಿಗೆ ಬಳ್ಳಾರಿಯ ವಿ.ಎಸ್.ಕೆ. ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಸಂಶೋಧನಾರ್ಥಿಯಾದ ಶ್ರೀ.ಸತೀಶ ಇವರಿಗೆ ಪಿಹೆಚ್.ಡಿ. ಪದವಿ ಪ್ರಕಟಿಸಲಾಗಿದೆ.



ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ, ಪ್ರಾಧ್ಯಾಪಕರಾದ ಡಾ.ಮೇಧಾವಿನಿ ಎಸ್.ಕಟ್ಟಿ ಅವರ ಮಾರ್ಗದರ್ಶನದಲ್ಲಿ "ಇನ್ ಫ್ರಾಸ್ಟ್ರಕ್ಚರ್ ಅಂಡ್ ಅಗ್ರಿಕಲ್ಚರ್ ಡೆವಲಪ್ಮೆಂಟ್ ಇನ್ ಕಲ್ಯಾಣ ಕರ್ನಾಟಕ ರೀಜನ್" ಎಂಬ ಶೀರ್ಷಿಕೆಯಡಿ ಮಹಾ ಪ್ರಬಂಧ ಮಂಡಿಸಿದ ಹಿನ್ನಲೆಯಲ್ಲಿ ಪಿಹೆಚ್.ಡಿ. ಪದವಿ ಪ್ರಧಾನ ಮಾಡಲಾಗಿದೆ. ದಿ. ಗಂಗಪ್ಪ ಮತ್ತು ಶ್ರೀಮತಿ. ಸಣ್ಣ ರುದ್ರಮ್ಮ ಇವರ ಮಗನಾದ ಶ್ರೀ.ಸತೀಶ ರವರು ಮೂಲತಃ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲೂಕಿನವರಾಗಿದ್ದು, ಪಿಹೆಚ್.ಡಿ. ಪದವಿ ಲಭಿಸಿದ ಹಿನ್ನೆಲೆಯಲ್ಲಿ ಅರ್ಥಶಾಸ್ತ್ರ ವಿಭಾಗದ ಬೋಧಕ ಬೋಧಕೇತರ ಸಿಬ್ಬಂದಿವರು, ಕುಟುಂಬದ ಸದಸ್ಯರು, ಸ್ನೇಹಿತರು, ಮತ್ತು ಸಮುದಾಯದ ಗುರು ಹಿರಿಯರು ಶುಭಾಶಯವನ್ನು ಕೋರಿದ್ದಾರೆ.

## ಕಂಪ್ಲಿಯಲ್ಲಿ ಸುರಿದ ಧಾರಕಾರ ಮಳೆ: ತಂಪೆರೆದ ಮಳೆರಾಯ: ರೈತರಲ್ಲಿ ಸಂತಸ

❏ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಇನ್ನೇನು ಈ ಬಾರಿಯ ಮುಂಗಾರು ಮಳೆ ಮರೆತೆವು ಎನ್ನುವಷ್ಟರಲ್ಲಿ ಮಳೆರಾಯನ ಕೃಪೆಯಿಂದ ಶನಿವಾರ ಕಂಪ್ಲಿ ಪಟ್ಟಣ ಸೇರಿದಂತೆ ತಾಲೂಕಿನ ಕೆಲ ಹಳ್ಳಿಗಳಲ್ಲಿ ಗಾಳಿ ಸಹಿತ ಮಳೆರಾಯನ ಆಗಮವಾಗಿದ್ದು, ರೈತರಲ್ಲಿ ಕೊಂಚ ಉಸಿರಾಡುವಂತೆ ಮಾಡಿರುವ ಜೊತೆಗೆ ಭೂಮಿ ತಂಪಾಗಿಸಿದೆ.

ಮುಂಗಾರು ಹಂಗಾಮಿನಲ್ಲಿ ಮಳೆ ಹೆಚ್ಚಾಗಿ ಸುರಿಯುವುದು ವಾಡಿಕೆ. ಆದರೆ, ಈಗಾಗಲೇ ಕಳೆದ ಎರಡು ತಿಂಗಳಿಂದ ಸಮರ್ಪಕವಾಗಿ ಮಳೆ ಬಾರದ ಹಿನ್ನಲೆ ರೈತರು ಕಂಗಾಲಾಗುವ ಜೊತೆಗೆ ಭೂಮಿ ತಂಪಾಗುವ ಬದಲು ಉರಿ ಬಿಸಿಲಿನ ವಾತಾವರಣದಿಂದ ಜನರು ರೋಸಿ ಹೋಗಿದ್ದರು. ಶನಿವಾರ ಮಧ್ಯಾಹ್ನ 3:45 ಸುಮಾ-ರಿಗೆ ಮೋಡಗಳಿಂದ ಬಂದಂತಹ ಮಳೆಯು ಕಂಪ್ಲಿ ಪಟ್ಟಣ, ಗ್ರಾಮೀಣ ಭಾಗದ ನಂ.10 ಮುದ್ದಾಪುರ, ರಾಮಸಾಗರ, ಸಣಾಪುರ ಸೇರಿದಂತೆ ಇನ್ನಿತರ ಪ್ರದೇಶದಲ್ಲಿ ಧಾರಕಾರವಾಗಿ ಸುರಿದೆ.

ಮಳೆಗಾಗಿ ಕೆಲವು ಕಡೆಗಳಲ್ಲಿ ಗುಡ್ಡೆಕಲ್ಲುಗಳಿಗೆ ಹಾಗೂ ಆಯಾ ದೇವಸ್ಥಾನಗಳಲ್ಲಿ ಜಲಾಭಿಷೇಕ ಮಾಡಿ, ಗಂಗೆಯು ಭೂಮಿಗೆ ಧರೆಗುರಳಲೆಂದು ಬೇಡಿದ್ದರು. ರೈತರ



ಮತ್ತು ಭಕ್ತರ ಕೋರಿಕೆಯಂತೆ ಈಗ ಕಂಪ್ಲಿಗೆ ಮಳೆರಾಯನ ಆಗಮವಾಗಿದ್ದು, ರೈತರಲ್ಲಿ ಮತ್ತು ಜನರು ಹರ್ಷದಾಯಕವಾಗಿದೆ. ಮಳೆ ಇಲ್ಲದೇ ಇರುವುದರಿಂದ ಮಳೆ ಆಶ್ರಿತ ರೈತರ ಜಮೀನುಗಳಲ್ಲಿ ಬೆಳೆದ ಬೆಳೆಗಳಿಗೆ ನೀರಿಲ್ಲಂತಾಗಿ, ಬೆಳೆಗಳು ಒಣಗುತ್ತಿರುವುದು ಕಂಡು ಬಂದಿದೆ. ರೈತರು ಮೋಡದತ್ತ ಕೈಬೀಸಿ ಕರೆಯುವಂತಾಗಿತ್ತು. ಆದರೆ, ಈಗ ಕಂಪ್ಲಿ ತಾಲೂಕಿನಲ್ಲಿ ಮಳೆ ಸುರಿದಿದ್ದು, ರೈತರ ಬೆಳೆಗಳಿಗೆ ನೀರುಣಿಸಿದಂತಾಗಿದ್ದು, ಮತ್ತು ಭೂಮಿ ತಂಪಾಗಿಸುವ ಮೂಲಕ ದನಕರುಗಳಿಗೆ ಹಸಿ ಮೇವಿಗೆ ಅನುವು ಮಾಡಿಕೊಟ್ಟಂತಾಗಿದೆ. ಮಳೆಯಿಂದಾಗಿ ರೈತರ ಬೆಳೆಗಳು ಚಿಗುರೊಡೆಯುವಂತೆ ಮಾಡಿದೆ. ಸತತ ಒಂದು ತಾಸು ಮಳೆ ಸುರಿದಿದ್ದು, ರೈತರಲ್ಲಿ ಸಂತಸ ಮೂಡಿದೆ. ಮಳೆಯಿಂದಾಗಿ ಭೂಮಿ ತಾಯಿ ತಂಪಾಗಿದ್ದಾಳೆ. ಇಷ್ಟು ದಿನ ಮಳೆಗಾಗಿ ಜಪಿಸಿದ



ರೈತರಿಗೆ ಮತ್ತು ಜನರಿಗೆ ಫಲ ಸಿಕ್ಕಂತಾಗಿದೆ.

ಇದೇ ತರನಾಗಿ ಮಳೆಯಾದರೆ, ಭೂತಾಯಿ ತಂಪಾಗುವ ಜೊತೆಗೆ ನದಿ, ಕೆರೆ, ಹಳ್ಳ-ಕೊಳ್ಳಗಳಲ್ಲಿ ನೀರು ಹರಿಯಲು ಸಾಧ್ಯ. ಮತ್ತು ಜನ ಜಾನುವಾರುಗಳಿಗೆ ಕುಡಿಯುವ ನೀರು ದೊರಕಲು ಸಾಧ್ಯ ಎಂಬುವಂತಾಗಿದೆ. ಪಟ್ಟಣದಲ್ಲಿ ಸುರಿಯುತ್ತಿರುವ ಮಳೆಯ ನಡುವೆ ಪೋಷಕರು ಶಾಲಾ ಮಕ್ಕಳಿಗೆ ಟವಲ್ ಹೊದಿಸಿಕೊಂಡು ಬೈಕ್‌ನಲ್ಲಿ ಮನೆ ಕಡೆಗೆ ಕರೆದುಕೊಂಡು ಹೋಗುತ್ತಿರುವುದು ಕಂಡು ಬಂತು. ಕೆಲ ಮಕ್ಕಳು ಛತ್ರಿ ಆಶ್ರಯದೊಂದಿಗೆ ಮನೆಗಳಿಗೆ ತೆರಳಿದರೆ, ಇನ್ನೂ ಕೆಲ ವಿದ್ಯಾರ್ಥಿಗಳು ಮಳೆಯಲ್ಲೇ ನೆನೆಯುತ್ತಾ ಸಾಗಿದರು. ಕೆಲ ಒತ್ತು ಮಳೆ ಸು-ರಿದ ಹಿನ್ನಲೆ ಜನರು ಕೆಲ ಅಂಗಡಿ, ಶೆಡ್‌ಗಳಲ್ಲಿ ಆಶ್ರಯ ಪಡೆದು, ಮಳೆ ನಿಂತ ಮೇಲೆ ತಮ್ಮ ತಮ್ಮ ಮನೆ ಮತ್ತು ಊರುಗಳಿಗೆ ತೆರಳಿದರು.

## ಜು.21 ರಿಂದ ಶ್ರೀ ಪಾಂಡುರಂಗ ವಿಠ್ಠಲ ಪ್ರವಚನ ಆರಂಭ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಆಷಾಢ ಏಕಾದಶಿ ನಿಮಿತ್ಯವಾಗಿ ಶ್ರೀ ಪಾಂಡುರಂಗ ವಿಠ್ಠಲ ಮಂದಿರ ಟ್ರಸ್ಟ್ ವತಿಯಿಂದ ಶ್ರೀ ಪಾಂಡುರಂಗ ವಿಠ್ಠಲ ಪ್ರವಚನ ಜುಲೈ 21 ರಿಂದ ಆರಂಭವಾಗಲಿದೆ.




ಪ್ರತಿದಿನ ಸಾಯಂಕಾಲ 6:00 ರಿಂದ 7:00 ಗಂಟೆಯವರೆಗೆ ವಿಠ್ಠಲ ಮಂದಿರದಲ್ಲಿ ನಡೆಯಲಿರುವ ಈ ಪ್ರವಚನ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ ಜುಲೈ 21ರಂದು ಸಂಜೆ 6ಗಂಟೆಗೆ ನಡೆಯಲಿದ್ದು ತಾಳಿಕೋಟಿ ಖಾಸ್ಗತೇಶ್ವರ ಮಠದ ಪರಮ ಪೂಜ್ಯ ಶ್ರೀ ಸಿದ್ದಲಿಂಗ ದೇವರು ಉದ್ಘಾಟಿಸುವರು. ನಾಡಿನ ಖ್ಯಾತ ಪ್ರವಚನಕಾರರಾದ ಪೂಜ್ಯ ಸಿದ್ದರಾಮ ಶಿವಯೋಗಿಗಳು ಹಾಗೂ ಸಮಾಜದ ಗಣ್ಯರು ಉಪಸ್ಥಿತರಿರುವರು. ಜುಲೈ 21 ರಿಂದ 25ರವರೆಗೆ ಐದು ದಿನಗಳ ಕಾಲ ನಡೆಯಲಿರುವ ಈ ಪ್ರವಚನದ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ಶ್ರೀ ಪಾಂಡುರಂಗ ವಿಠ್ಠಲ ಮಂದಿರ ಟ್ರಸ್ಟ್ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಗ್ರಾಮದೇವಿಯ ಭವ್ಯ ರಥೋತ್ಸವ

❏ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಜರುಗುವ ದ್ಯಾಮವ್ವ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಗ್ರಾಮ ದೇವತೆಯ ಭವ್ಯ ರಥೋತ್ಸವ ಶುಕ್ರವಾರ ಅದ್ದೂ-ರಿಯಾಗಿ ಜರುಗಿತು. ಪಟ್ಟಣದ ಶ್ರೀ ಹೇಮರೆಡ್ಡಿ ಮಲ್ಲಮ್ಮ ತಾಯಿ ದೇವಸ್ಥಾನದಿಂದ ಮುಂಜಾನೆ 11ಘಂಟೆಗೆ ಆರಂಭವಾದ ರಥೋತ್ಸವಕ್ಕೆ ಸ್ಥಳೀಯ ಶ್ರೀ ಖಾಸ್ಗತೇಶ್ವರ ಮಠದ ಪೂಜ್ಯ



ಸಿದ್ದಲಿಂಗ ಮಹಾಸ್ವಾಮಿಗಳು ಚಾಲನೆ ನೀಡಿದರು.

ಅಲ್ಲಿಂದ ಸಕಲ ವಾದ್ಯ ಮೇಳಗಳೊಂದಿಗೆ ಆರಂಭವಾದ ರಥೋತ್ಸವವು ಡಾ.ಅಂಬೇಡ್ಕರ್ ಸರ್ಕಲ್, ಶ್ರೀ ಅಂಬಾಭವಾನಿ ದೇವಸ್ಥಾನ ರಸ್ತೆ, ಕತ್ರಿ ಬಜಾರ್ ಮಾರ್ಗವಾಗಿ ದ್ಯಾಮವ್ವ ತಾಯಿಯ ಪ್ರತಿಷ್ಠಾಪನಾ ಸ್ಥಳವಾದ ರಾಜವಾಡೆಗೆ ತಲುಪಿತು. ಅಲ್ಲಿ ಸಕಲ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದ ನಂತರ ಶ್ರೀ ಗ್ರಾಮದೇವತೆಯನ್ನು ಪ್ರತಿಷ್ಠಾಪಿಸಲಾಯಿತು. ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ಪುನೀತರಾದರು. ರಥೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಗ್ರಾಮ ದೇವತೆ ಜಾತ್ರಾ ಮಹೋತ್ಸವ ಕಮಿಟಿ ಪದಾಧಿಕಾ-ರಿಗಳು.ಪಟ್ಟಣದ ಗಣ್ಯರು, ಹಿರಿಯರು ಹಾಗೂ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಿದ್ದರು. ಜುಲೈ 17 ರಿಂದ 21ರವರೆಗೆ ಐದು ದಿನಗಳ ಕಾಲ ನಡೆಯಲಿರುವ ಈ ಜಾತ್ರೋತ್ಸವದಲ್ಲಿ ಪ್ರತಿದಿನವೂ ವಿಶೇಷ ಕಾರ್ಯಕ್ರಮಗಳು ಜರುಗುಲಿವೆ.

## ಕಾರುಣ್ಯಾಶ್ರಮದಲ್ಲಿ ಬಿಜೆಪಿ ಮುಖಂಡರಾದ ಕೆ ಕರಿಯಪ್ಪ ಅವರ ಜನ್ಮದಿನ ಸಮಾರಂಭ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಭಾರತೀಯ ಜನತಾ ಪಾರ್ಟಿ ಸಿಂಧನೂರು ಹಾಗೂ ಕೆ.ಕರಿಯಪ್ಪ ಅಭಿಮಾನಿ ಬಳಗ ಸಿಂಧನೂರು ವತಿಯಿಂದ ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಸಿಂಧನೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರಾದ ಕೆ. ಕರಿಯಪ್ಪ ಅವರ 60ನೇ ವರ್ಷದ ಜನ್ಮದಿನೋತ್ಸವ ಸಮಾರಂಭ ಕಾರ್ಯಕ್ರಮವನ್ನು ಆಶ್ರಮದಲ್ಲಿ ಅನ್ನಸಂತರ್ಪಣೆ ಹಣ್ಣುಹಂಪೂರ್ಗಳ ವಿತರಣೆ ಮಾಡುವ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ನೆರವೇರಿತು.

ಈ ಕಾರ್ಯಕ್ರಮದಲ್ಲಿ ಆಶ್ರಮದ ವತಿಯಿಂದ ಕೆ.ಕರಿಯಪ್ಪ ಅವರ ಸರಳ ಸಾಮಾನ್ಯ ವ್ಯಕ್ತಿತ್ವ ಹಾಗೂ ಹಲವಾರು ಸಮಾಜಪರ ಕಾರ್ಯಗಳನ್ನು ಗುರುತಿಸಿ " ಕರುನಾಡ



ಕಾರುಣ್ಯ ಕರುಣಾಮಯಿಗಳು " ಎನ್ನುವ ಶ್ರೇಷ್ಠ ಗೌರವಾನ್ವಿತ ಬಿರುದಿನ ಅಭಿಧಾನದ ಮೂಲಕ ಆಶೀರ್ವದಿಸಲಾಗುವುದು ಎಂದು ಆಶ್ರಮದ ಆಶ್ರಯದಾತರುಗಳು ಶುಭ ಕೋರುವ ಮೂಲಕ ಸಮಾಜಕ್ಕೆ ತಿಳಿಸಿದರು. ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಕೆ. ಕರಿಯಪ್ಪ ಅಣ್ಣನವರ ಸುಂದರ ಸಿಂಧನೂರಿನ ಕನಸು ನನಸ್ಸಾಗಲಿ ಎನ್ನುವ ಪ್ರಾರ್ಥನೆ ಕಾರುಣ್ಯ ಕುಟುಂಬದ್ದು. ಸರಳ ಸಾಮಾನ್ಯ ವ್ಯಕ್ತಿತ್ವದ ಅಪರೂಪದ ರಾಜಕಾರಣಿ ಕೆ. ಕರಿಯಪ್ಪ ಅಣ್ಣನವರು ಇವರು ಕಾರುಣ್ಯ ಕುಟುಂಬಕ್ಕೆ ನೆಲೆ ಇಲ್ಲದಂತಹ ಸಂದರ್ಭದಲ್ಲಿ ಸುಮಾರು ಹತ್ತು ವರ್ಷಗಳ ಕಾಲ ಬಾಡಿಗೆಯ ರೂಪದಲ್ಲಿ ಸ್ಥಳಾವಕಾಶ ಮಾಡಿಕೊಟ್ಟು ಕಾರುಣ್ಯ ಆಶ್ರಮದ ಆಶ್ರಯದಾತರುಗಳಾದ ಹಿರಿಯ ವೃದ್ದರಿಗೆ ಮಗನಾಗಿ ಮೊಮ್ಮಗನಾಗಿ ಮತ್ತು ವಯಸ್ಕರ ಬುದ್ಧಿಮಾಂದ್ಯರಿಗೆ ಸಹೋದರನಾಗಿ ಹಂಚುತ್ತಿರುವ ಈ ಪ್ರೀತಿ ವಿಶ್ವಾಸಕ್ಕೆ ಯಾವತ್ತೂ ಕೂಡ ಕಾರುಣ್ಯ ಕುಟುಂಬವು ಸನ್ಮಾನ್ಯ ಶ್ರೀ ಕೆ.ಕ-ರಿಯಪ್ಪ ಅಣ್ಣನವರಿಗೆ ಚಿರಋಣಿಯಾಗಿರುತ್ತದೆ. ಇಂದಿನ ಅವರ ಜನ್ಮದಿನ ಬರೀ ಅನಾಥರಿಗಲ್ಲದೆ ರೈತರ ಕಷ್ಟ ನಿವಾರಣೆಗಾಗಿ ಪರ್ಜನ್ಯ ಹೋಮದ ಮೂಲಕ ವರುಣ ಯಾಗವನ್ನು ಮಾಡಿ ಈ ಪೂಜೆಗೆ ಫಲ ಶ್ರುತಿಯನ್ನು ಪಡೆದುಕೊಂಡು. ಮಳೆರಾಯ ಭಗವಂತನ ಪ್ರೀತಿಗೆ ಪಾತ್ರವಾಗಿರುವ ಇವರ ಸರಳ ಸಾಮಾನ್ಯ ವ್ಯಕ್ತಿತ್ವ ಇವರೆಲ್ಲಾ ಕನಸುಗಳನ್ನು ನನಸಾಗಿಸಲಿ ಮತ್ತು ಇವರ ಬಾಳ ಸಂಗಾತಿಯಾಗಿರುವಂತ ಶ್ರೀಮತಿ ಕೆ.ವಿಜಯಲಕ್ಷ್ಮಿ ಅಮ್ಮನವರು ಕರುಣೆಯ ಕಾರುಣ್ಯ ಮಾತೆಯಾಗಿ ನೊಂದ ಜೀವಿಗಳಿಗೆ ನಾಡಿಮಿಡಿತವಾಗಿ ಸಮಾಜದಲ್ಲಿ ಅಗಾಧವಾದ ಪ್ರೀತಿಯ ಮೂಲಕ ತಮ್ಮನ್ನು ತಾವು ಸಮಾಜಿಕ ಅರ್ಪಣೆ ಮಾಡಿಕೊಂಡಿದ್ದಾರೆ.

ಈ ಆದರ್ಶ ದಂಪತಿಗಳ ಮತ್ತು ಸಿಂಧನೂರು ಸುಕಾಲಪೇಟೆಯ ಕೊಂತನೂರು ಕುಟುಂಬದ ಸಮಾಜ ಸೇವೆಗೆ ಕರುಣೆಯ ಕಾರುಣ್ಯ ಕುಟುಂಬದ ವತಿಯಿಂದ ಶುಭಾಶೀರ್ವಾದ. ಸನ್ಮಾನ್ಯ ಶ್ರೀ ಕೆ. ಕರಿಯಪ್ಪ ಅಣ್ಣನವರಿಗೆ ಇಂದಿನ ಅವರ ಜನ್ಮದಿನದ ಶುಭ ಸಂದರ್ಭದಲ್ಲಿ ಕಾರುಣ್ಯ ಕುಟುಂಬದ ವತಿಯಿಂದ ಅವರಿಗೂ ಹಾಗು ಅವರ ಕುಟುಂಬಕ್ಕೆ ಸಕಲೈಶ್ವರ್ಯ ಸಿರಿ ಸಂಪತ್ತು ಆಯಸ್ಸು ಆಯುರಾರೋಗ್ಯ ಕರುಣಿಸಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ಜನ್ಮದಿನದ ಶುಭಾಶಯಗಳನ್ನು ಕೋರಿ ಹಾರೈಸಿ ಹಾರೈಸಿ ಆಶೀರ್ವದಿಸಲಾಗಿದೆ. ಎಂದು ಮಾತನಾಡಿದರು. ಈ ಸಮಯದಲ್ಲಿ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮ-ರಿಯಪ್ಪ.ಜ್ಯೋತಿ. ಶರಣು ಸ್ವಾಮಿ. ಹಾಗೂ ಅಪಾರ ಕರಿಯಪ್ಪ ಅಭಿಮಾನಿಗಳು ಭಾಗವಹಿಸಿದ್ದರು.

# ನೇಮಕಾತಿ ಪ್ರಕಟಣೆ

**DHFWS ಉಡುಪಿ ನೇಮಕಾತಿ 2026 ? 18 ಕಿರಿಯ ಪ್ರಯೋಗಾಲಯ ತಾಂತ್ರಿಕ ಅಧಿಕಾರಿ ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ 17 ಜುಲೈ 2026**

DHFWS ಉಡುಪಿ ನೇಮಕಾತಿ 2026: 18 ಕಿರಿಯ ಪ್ರಯೋಗಾಲಯ ತಾಂತ್ರಿಕ ಅಧಿಕಾರಿ (Junior Laboratory Technical Officer) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (DHFWS) ಉಡುಪಿಯು, ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಕಿರಿಯ ಪ್ರಯೋಗಾಲಯ ತಾಂತ್ರಿಕ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಉಡುಪಿಯಲ್ಲಿ ಕರ್ನಾಟಕ ಸರ್ಕಾರದ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 21-ಜುಲೈ-2026 ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: udupi.nic.in

## ಜಾತ್ರಾ ಮಹೋತ್ಸವ ಮೂರನೆಯ ದಿನ ಕಾರ್ಯಕ್ರಮಗಳು

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪ್ರತಿ ಮೂರು ವರ್ಷಕ್ಕೊಮ್ಮೆ ಜರುಗುವ ಗ್ರಾಮದೇವತೆ ಜಾತ್ರಾ ಮಹೋತ್ಸವದಂಗವಾಗಿ ಮೂರನೆಯ ದಿನವಾದ ಜು.19 ರಂದು ಭಾನುವಾರ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಮತ್ತು ಮಧ್ಯಾಹ್ನ 3.300ರಿಂದ ಸಂಜೆ 6.00 ಗಂಟೆಯವರೆಗೆ ಗೀಗೀ ಪದಗಳು,**

ಸಂಜೆ 6: 30 ಗಂಟೆಯಿಂದ ಧರ್ಮಸಭೆ ನಡೆಯಲಿದೆ ಇದರ ದಿವ್ಯ ಸಾನಿಧ್ಯವನ್ನು ಶ್ರೀ ಖಾಸ್ಗತೇಶ್ವರ ಮಠದ ಪೂಜ್ಯ ಸಿದ್ದಲಿಂಗ ದೇವರು, ಬಸರಳ್ಳಿ ಗವಿಸಿದ್ದೇಶ್ವರ ಶಾಖಾಮಠದ ಪೂಜ್ಯ ಶಿವ ಶಾಂತವೀರ ಮಹಾಸ್ವಾಮಿಗಳು ವಹಿಸುವರು. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕರಾದ ಅಪ್ಪಾಜಿ ನಾಡಗೌಡ, ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ಪ್ರಭುಗೌಡ ಚಂ.ದೇಸಾಯಿ ಹಾಗೂ ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್ ಎಸ್ ಪಾಟೀಲ ಕೂಚಬಾಳ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಪುರಸಭೆ ಮಾಜಿ ಅಧ್ಯಕ್ಷ ಬಾಪುಗೌಡ ಸಂ.ಪಾಟೀಲ ಅಧ್ಯಕ್ಷತೆ ವಹಿಸುವರು. ಬೆಳಿಗ್ಗೆ 10.00 ಗಂಟೆಗೆ ರಾಜ್ಯಮಟ್ಟದ ಕಬಡ್ಡಿ ಪಂಧ್ಯಾವಳಿ ಜರುಗಲಿದ್ದು, ವಿಜೇತರಿಗೆ ಪ್ರಥಮ- 30 ಸಾವಿರ, ದ್ವಿತೀಯ 20ಸಾವಿರ, ತೃತೀಯ 15 ಸಾವಿರ ಹಾಗೂ ಚತುರ್ಥ 10 ಸಾವಿರ ಬಹುಮಾನ ದೊರೆಯಲಿದೆ. ರಾತ್ರಿ 9.30 ಗಂಟೆಯಿಂದ ಉತ್ತರ ಕರ್ನಾಟಕದ ಜಾನಪದ ಮತ್ತು ಹಾಸ್ಯ ಸಂಭ್ರಮ, ಕಾರ್ಯಕ್ರಮವು ಕಾಮಿಡಿ ಕಿಲಾಡಿ ವಿಜೇತ ಮಹಾಂತೇಶ ತಾಳಿಕೋಟಿ,ಕಲಾವಿದರಾದ ನಯನಾ,ಪ್ರವೀಣ,ಅಣ್ಣಪ್ಪ,ಹಾಗೂಮಿಮಿಕ್ರಿ ಕಲಾವಿದ ಸಾಗರ ತುರುವೇಕೇರಿ, ಶಬ್ಬೀರ ಢಾಂಗೆ, ರಮೇಶ ಕುರುಬಗಟ್ಟಿ,ಇವರಿಂದ ಭರ್ಜರಿ ಹಾಸ್ಯ ಮನರಂಜನೆ ನೀಡಲಿದ್ದಾರೆ.






**ನೈಜ್ಯ ದೆಸೆ**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

# "ಒಳ್ಳೆಯ ಕಾರ್ಯಕ್ಕೆ ದೇವರ ಆಶೀರ್ವಾದ ಇರುತ್ತದೆ" ಮಳೆ ಸುರಿದದ್ದೇ ಅದಕ್ಕೆ ಸಾಕ್ಷಿ: ರಾಜಾ ವೆಂಕಟಪ್ಪ ನಾಯಕ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಉತ್ತಮ ಕಾರ್ಯ ಹಾಗೂ ಒಳ್ಳೆಯ ಉದ್ದೇಶದೊಂದಿಗೆ ಜನರು ಒಂದಾದಾಗ ದೇವರ ಆಶೀರ್ವಾದ ಸದಾ ಇರುತ್ತದೆ ಎಂದು ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ ಹೇಳಿದರು.**

ಜನತಾದಳ ಜಾತ್ಯತೀತ ಪಕ್ಷದ ವತಿಯಿಂದ ರೈತರ ಬದುಕು ಹಸನಾಗಲಿ ಹಾಗೂ ತುಂಗಭದ್ರ ಜಲಾಶಯ ಭರ್ತಿಯಾಗಿ ನಾಡು ಸುಭಿಕ್ಷವಾಗಲಿ ಎಂಬ ಸಂಕಲ್ಪದೊಂದಿಗೆ ಹಮ್ಮಿಕೊಂಡಿದ್ದ ಮಳೆಗಾಗಿ ಪಾದಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, "ಒಳ್ಳೆಯ ಕಾರ್ಯಕ್ಕೆ, ಒಳ್ಳೆಯ ಜನರ ಜೊತೆ ಯಾವತ್ತೂ ದೈವ ಇರುತ್ತದೆ ಎನ್ನುವುದಕ್ಕೆ ಇವತ್ತು ಸುರಿದ ಮಳೆಯೇ ಸಾಕ್ಷಿ. ನನ್ನ ಒಂದೇ ಕರೆಗೆ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ಪಾದಯಾತ್ರೆಯನ್ನು ಯಶಸ್ವಿಗೊಳಿಸಿದ ಕಾರ್ಯಕರ್ತರು ಹಾಗೂ ರೈತರಿಗೆ ನಾನು ಚಿರಋಣಿ" ಎಂದು ಹೇಳಿದರು.

ರೈತರ ಹಿತದ ಬಗ್ಗೆ ಮಾತನಾಡಿದ ಅವರು, ತಾವು ಶಾಸಕನಾಗಿದ್ದ ಅವಧಿಯಲ್ಲಿ




ರೈತರಿಗೆ ಎರಡು ಬೆಳೆಗಳಿಗೆ ನೀರು ಒದಗಿಸುವ ಕೆಲಸ ಮಾಡಿದ್ದಾಗಿ ತಿಳಿಸಿದರು. ಆದರೆ ಪ್ರಸ್ತುತ ರೈತರ ಸಮಸ್ಯೆಗಳನ್ನು ಆಲಿಸಿ ಪರಿಹಾರ ನೀಡುವವರು ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಂದುವರಿದು, "2028ರಲ್ಲಿ ನಾನು ಮತ್ತೆ ಶಾಸಕನಾಗಿ ಆಯ್ಕೆಯಾದರೆ ಪ್ರತಿಯೊಬ್ಬ ಕಾರ್ಯಕರ್ತ ಹಾಗೂ ರೈತರ ಸಮಸ್ಯೆಗಳಿಗೆ ಸ್ಪಂದಿಸಿ, ಅವರ ಕೆಲಸಗಳನ್ನು ಮಾಡುವ ಸಂಕಲ್ಪ ಹೊಂದಿದ್ದೇನೆ" ಎಂದು ಹೇಳಿದರು.

ವಿಶೇಷವೆಂದರೆ, ಮಾರಿಕಾಂಬಾ ದೇವಿ ದೇವಸ್ಥಾನದಿಂದ ಆರಂಭವಾದ ಪಾದಯಾತ್ರೆ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸುತ್ತಾ ನೀರಮಾನ್ವಿಯ ಶ್ರೀ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನ ತಲುಪಿತು. ಪಾದಯಾತ್ರೆ ಮಾನ್ವಿ ಪಟ್ಟಣ ಪ್ರವೇಶಿಸುತ್ತಿದ್ದಂತೆಯೇ ಮಳೆ ಆರಂಭವಾಗಿ ಪಟ್ಟಣ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ರೈತರು ಸಂತಸ ವ್ಯಕ್ತಪಡಿಸಿದರು. ದೇವಿಯ ಕೃಪೆಯಿಂದ ಮಳೆಯಾಗಿದೆ ಎಂದು ಸ್ಥಳೀಯರು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಮಾಜಿ ಸಚಿವ ವೆಂಕಟರಾವ್ ನಾಡಗೌಡ, ರಾಜ್ಯ ಯುವ ಘಟಕದ ಉಪಾಧ್ಯಕ್ಷ ರಾಜಾ ರಾಮಚಂದ್ರ ನಾಯಕ, ತಾಲೂಕು ಅಧ್ಯಕ್ಷ ಈರಣ್ಣ ಮರ್ಲಟ್ಟಿ, ಟಿ. ಮಲ್ಲಿಕಾರ್ಜುನ ಪಾಟೀಲ್ ಬಲ್ಲಟಗಿ, ಹೆಚ್. ಮೌನೇಶ್ ಗೌಡ, ಶರಣಪ್ಪಗೌಡ ಮದ್ಲಾಪುರ್ ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ರೈತರು ಹಾಗೂ ಸಾವಿರಾರು ಸಾರ್ವಜನಿಕರು ಭಾಗವಹಿಸಿದ್ದರು.

# ಸ್ವಾತಂತ್ರ್ಯ ಸಿಕ್ಕು 79 ವರ್ಷ ಕಳೆದರು ಬಸ್ ಕಾಣದ ಗುಡಪಳ್ಳಿ ಗ್ರಾಮ :ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಗ್ರಾಮಸ್ಥರ ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್

**ಔರಾದ : ದೇಶಕ್ಕೆ ಸ್ವಾತಂತ್ರ್ಯ ದೊರೆತು 79 ವರ್ಷಗಳಾದರೂ ಔರಾದ ತಾಲೂಕಿನ ಗುಡಪಳ್ಳಿ ಗ್ರಾಮಕ್ಕೆ ಕನಿಷ್ಠ ಸರ್ಕಾರಿ ಬಸ್ ಸೌಲಭ್ಯವೂ ಲಭ್ಯವಾಗಿಲ್ಲ. ಇದು ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯದ ಪ್ರತೀಕಾರವಾಗಿದೆ. ಹೀಗಾಗಿ. ಗುಡಪಳ್ಳಿ ಗ್ರಾಮಸ್ಥರು ಇಂದಿಗೂ ಮೂಲಭೂತ ಸಾರ್ವಜನಿಕ ಸಾರಿಗೆಗಾಗಿ ಅಲೆದಾಡಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದಾರೆ.ಬಸ್ ಸೌಲಭ್ಯವಿಲ್ಲದ ಕಾರಣ ವಿದ್ಯಾರ್ಥಿಗಳು.ಮಹಿಳೆಯರು. ವೃದ್ಧರು.**

ಹಾಗೂ ಅನಾರೋಗ್ಯ ಪೀಡಿತರು ಪ್ರತಿದಿನ ಸಂಕಷ್ಟ ಅನುಭವಿಸುತ್ತಿದ್ದಾರೆ.ಗುಡಪಳ್ಳಿ ಗ್ರಾಮದ ವಿದ್ಯಾರ್ಥಿಗಳು ಬೀದರ ಹಾಗೂ ಔರಾದ ಭಾಗಗಳ ಶಾಲಾ ಕಾಲೇಜುಗಳಿಗೆ ತೆರಳಲು ಪ್ರತಿದಿನ ಸುಮಾರು 2 ರಿಂದ.5 ಕೀ.ಮೀ.ದೂರದ ವಡಗಾಂವ ಹಾಗೂ ಸಂತಪೂರ.ಗ್ರಾಮಕ್ಕೆ ತೆರಳಿ ಅಲ್ಲಿಂದ ಬಸ್




ಹಿಡಿಯಬೇಕಾಗಿದೆ.ಮಳೆ. ಬಿಸಿಲು.ಚಳಿ. ಎನ್ನದೆ ಈ ಕಷ್ಟ ಅನುಭವಿಸಬೇಕಾಗಿದ್ದು.ಶಿಕ್ಷಣ ಪಡೆಯುವುದೇ ಸವಲಾಗಿ ಪರಿಣಮಿಸಿದೆ. ಮುಂದಿನ ಉಜ್ವಲ ಭವಿಷ್ಯದ ಕನಸು ಕಾಣುತ್ತಿರುವ ಗ್ರಾಮದ ವಿಶೇಷ ಚೇತನರು.ವಿದ್ಯಾರ್ಥಿಗಳು. ಹಾಗೂ ವಿದ್ಯಾರ್ಥಿನಿಯರು. ಸಮರ್ಪಕ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಕೊರತೆಯಿಂದ ಪ್ರೌಢಶಾಲೆ ಮತ್ತು ಕಾಲೇಜು ಶಿಕ್ಷಣದಿಂದ ವಂಚಿತರಾಗುವ ದುಸ್ಥಿತಿಗೆ ತಳ್ಳಲ್ಪಟ್ಟಿದ್ದಾರೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳ ನಿರ್ಲಕ್ಷಕ್ಕೆ ಇಂದಿಗೂ ತೊಂದರೆ ಅನುಭವಿಸುತ್ತಿದ್ದೇನೆ ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಗುಡಪಳ್ಳಿ ಗ್ರಾಮಕ್ಕೆ ಬಸ್ ಸೌಲಭ್ಯವಿಲ್ಲ ಎಂಬ ಕಾರಣಕ್ಕೆ ಅವರ ಶೈಕ್ಷಣಿಕ ಕನಸುಗಳು ನಲುಗುತ್ತಿವೆ. ಅದರಲ್ಲೂ ಪ್ರೌಢಶಾಲೆ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರು ಮುಂಜಾನೆ ಹಾಗೂ ಸಂಜೆ ನಿರ್ಜನ ರಸ್ತೆಯಲ್ಲಿ ನಡೆದು ಸಂಚರಿಸ ಬೇಕಾಗಿರುವುದು ಪೋಷಕರ ಆತಂಕ ಹೆಚ್ಚಿಸಿದೆ.ಮಹಿಳೆಯರ ಸುರಕ್ಷತೆ ಕುರಿತು ಸರ್ಕಾರ ಭರವಸೆ ನೀಡುತ್ತಿದ್ದರೂ ಸುರಕ್ಷಿತ ಸಾರ್ವಜನಿಕ ಸಾರಿಗೆ ಸೌಲಭ್ಯ ಕಲ್ಪಿಸಲು ವಿಫಲವಾಗಿರುವುದು ಗ್ರಾಮೀಣ ಹೆಣ್ಣುಮಕ್ಕಳ ಶಿಕ್ಷಣಕ್ಕೆ ದೊಡ್ಡ ಅಡ್ಡಿಯಾಗಿದೆ.

ಗಮನಾರ್ಹ ಸಂಗತಿಯೆಂದರೆ ಗುಡಪಳ್ಳಿ ಗ್ರಾಮಕ್ಕೆ ಸಂಪರ್ಕಿಸುವ ರಸ್ತೆ ಉತ್ತಮ ಸ್ಥಿತಿಯಲ್ಲಿದ್ದು.ಕೆಕೆಆರ್‌ಟಿಸಿ ಬಸ್ ಸಂಚಾರಕ್ಕೆ ಯಾವುದೇ ತಾಂತ್ರಿಕ ಅಥವಾ ರಸ್ತೆ ಸಂಬಂಧಿತ ಅಡ್ಡಿ ಯಿಲ್ಲ.ಆದರೂ ಕಳೆದ ಹಲವು ವರ್ಷಗಳಿಂದ ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು ನಿರಂತರವಾಗಿ ಮನವಿ ಸಲ್ಲಿಸುತ್ತಿದ್ದರು ಸಂಬಂಧಪಟ್ಟ ಅಧಿಕಾರಿಗಳು ಸ್ಪಂದಿಸಿದೆ ರುವುದಕ್ಕೆ ಗ್ರಾಮಸ್ಥರಿಂದ ತೀವ್ರ ಅಸಮಾಧಾನ ವ್ಯಕ್ತವಾಗಿದೆ. ಬೀದರ ನಿಂದ ವಡಗಾಂವ ಹಾಗೂ ಗುಡಪಳ್ಳಿ ಮಾರ್ಗ ಕೆಕೆಆರ್‌ಟಿಸಿ ಬಸ್ ಗಳನ್ನು ಚಿಂತಾಕಿ ಔರಾದ ತಾಲೂಕಕ್ಕೆ ವಿಸ್ತರಿಸಿದರೆ ನೂರಾರು ವಿದ್ಯಾರ್ಥಿಗಳು.ರೈತರು.

ಕಾರ್ಮಿಕರು. ಮಹಿಳೆಯರು ಹಾಗೂ ವೃದ್ಧರಿಗೆ ಅನುಕೂಲವಾಗಲಿದೆ ಈ ಕುರಿತು ಹಲವು ಬಾರಿ ಬೀದರ ಜಿಲ್ಲೆಯ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬೀದರ ವಿಭಾಗದ ವಿಭಾಗಿಯ ನಿಯಂತ್ರಣ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳದೆರುವುದರಿಂದ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ

# ವಂದೇ ಮಾತರಂಗೆ ಗೀತೆಗೆ ಕಾನೂನು ರಕ್ಷಣೆ ನೀಡಲು ಮುಂದಾದ ಕೇಂದ್ರ ಸರ್ಕಾರ

❑ ನೈಜ್ಯ ದೆಸೆ ನ್ಯೂಸ್

**ನವದೆಹಲಿ; ಭಾರತದ ರಾಷ್ಟ್ರೀಯ ಗೀತೆಗಳಲ್ಲೊಂದಾದ ಮತ್ತು ದೇಶಭಕ್ತಿಯ ಸಂಕೇತವಾಗಿರುವ ವಂದೇ ಮಾತರಂಗೆ ವಿಶೇಷ ಕಾನೂನು ರಕ್ಷಣೆ ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ. ಮುಂಬರುವ ಸಂಸತ್ತಿನ ಅಧಿವೇಶನದಲ್ಲಿ ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆಗಟ್ಟುವಿಕೆ (ತಿದ್ದುಪಡಿ) ಮಸೂದೆಯನ್ನು ಮಂಡಿಸಲು ಸರ್ಕಾರ ಸಿದ್ಧತೆ ನಡೆಸಿದೆ.**

ಈ ಮಸೂದೆಯು ಅಂಗೀಕಾರಗೊಂಡರೆ, ವಂದೇ ಮಾತರಂ ಗೀತೆಗೆ ಅವಮಾನ ಮಾಡಿದರೆ ಅಥವಾ ಹಾಡುವಾಗ ಅಡ್ಡಿಪಡಿಸಿದರೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಕಾನೂನು ರಕ್ಷಣೆ: ಪ್ರಸ್ತುತ ರಾಷ್ಟ್ರಗೀತೆ, ರಾಷ್ಟ್ರಧ್ವಜ ಮತ್ತು ಸಂವಿಧಾನಕ್ಕೆ ಇರುವಂತೆಯೇ, ವಂದೇ ಮಾತರಂಗೂ ಸಮಾನವಾದ ಕಾನೂನು ಸ್ಥಾನಮಾನ ಸಿಗಲಿದೆ. ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆಗಟ್ಟುವಿಕೆ ಕಾಯ್ದೆ-1971ನ್ನು ತಿದ್ದುಪಡಿ ಮಾಡುವ ಮೂಲಕ ಈ ಹೊಸ ನಿಬಂಧನೆಯನ್ನು ಸೇರಿಸಲಾಗುತ್ತಿದೆ.

ಈ ಗೀತೆಯನ್ನು ಹಾಡುವಾಗ ಅಥವಾ ನುಡಿಸುವಾಗ ಉದ್ದೇಶಪೂರ್ವಕವಾಗಿ ಅಡ್ಡಿಪಡಿಸಿದರೆ ಅಥವಾ ಅವಮಾನಿಸಿದರೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ, ದಂಡ




ಅಥವಾ ಎರಡನ್ನೂ ವಿಧಿಸಲು ಅವಕಾಶವಿರುತ್ತದೆ. ರಾಜಕೀಯ ಸಂಘರ್ಷ ಈ ಮಸೂದೆಯು ಕೇವಲ ಕಾನೂನಾತ್ಮಕ ಬದಲಾವಣೆಯಲ್ಲ, ಬದಲಾಗಿ ದಶಕಗಳ ಹಳೆಯ ರಾಜಕೀಯ ಸಂಘರ್ಷವನ್ನೂ ಮತ್ತೆ ಮುನ್ನೆಲೆಗೆ ತಂದಿದೆ.

1875ರಲ್ಲಿ ಬಂಕಿಮಚಂದ್ರ ಚಟ್ಟೋಪಾಧ್ಯಾಯರು ರಚಿಸಿದ ಈ ಗೀತೆಯ ಸಂಪೂರ್ಣ ಆವೃತ್ತಿಯನ್ನು ಹಾಡುವ ಕುರಿತು ಭಿನ್ನಾಭಿಪ್ರಾಯಗಳಿವೆ.ಕಳೆದ ಚಳಿಗಾಲದ ಅಧಿವೇಶನದಲ್ಲಿಯೂ ಇದೇ ವಿಷಯದ ಕುರಿತು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ತೀವ್ರ ವಾಕ್ಸಮರ ನಡೆದಿತ್ತು. ಇದೀಗ ಮಸೂದೆಯನ್ನು ಮಂಡಿಸುತ್ತಿರುವ ಸರ್ಕಾರ, ಇದು ರಾಷ್ಟ್ರೀಯ ಗೀತೆಗೆ ಅಧಿಕೃತ ಮಾನ್ಯತೆ ನೀಡುವ ಪ್ರಯತ್ನ ಎಂದು ಹೇಳುತ್ತಿದೆ.

ಆದರೆ, ವಿರೋಧ ಪಕ್ಷಗಳು ಇದನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವ ವಿಷಯ ಎಂದು ಬಲವಾಗಿ ವಿರೋಧಿಸುವ ಸಾಧ್ಯತೆಯಿದೆ.ಒಟ್ಟಾರೆಯಾಗಿ, ಈ ಮಸೂದೆಯು ಸಂಸತ್ತಿನಲ್ಲಿ ಭಾರೀ ಚರ್ಚೆಗೆ ವೇದಿಕೆಯಾಗುವುದಂತೂ ಖಚಿತ. 150ನೇ ವರ್ಷದ ಆಚರಣೆಯ ಹೊಸ್ತಿಲಲ್ಲಿರುವ ವಂದೇ ಮಾತರಂ, ಮತ್ತೊಮ್ಮೆ ದೇಶದ ರಾಜಕೀಯ ವಾತಾವರಣವನ್ನು ಬಿಸಿಯೇರಿಸಿದೆ.

1937ರಲ್ಲಿ ಜವಾಹರಲಾಲ್ ನೆಹರು ಅವರ ನೇತೃತ್ವದ ಕಾಂಗ್ರೆಸ್, ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಬಳಸಲು ನಿರ್ಧರಿಸಿತ್ತು. ನಂತರದ ಚರಣಗಳಲ್ಲಿನ ಕೆಲವು ಪದಗಳು ಮುಸ್ಲಿಂ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಬಹುದು ಎಂಬ ಆಕ್ಷೇಪಗಳೇ ಇದಕ್ಕೆ ಕಾರಣ ಎಂದು ಹೇಳಲಾಗುತ್ತದೆ.

ಈ ನಿರ್ಧಾರವನ್ನು ಬಿಜೆಪಿ ತೀವ್ರವಾಗಿ ಟೀಕಿಸುತ್ತಾ ಬಂದಿದೆ. ಕಾಂಗ್ರೆಸ್ ತುಷ್ಟೀಕರಣದ ರಾಜಕಾರಣಕ್ಕಾಗಿ ವಂದೇ ಮಾತರಂನ ಘನತೆಯನ್ನು ಕಡಿಮೆ ಮಾಡಿತು ಎಂದು ಬಿಜೆಪಿ ನಾಯಕರು ಆರೋಪಿಸುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರೂ ಸಹ ಈ ನಿರ್ಧಾರವು ಅಂದಿನ ಕಾಲದಲ್ಲಿ ವಿಭಜನೆಯ ಬೀಜಗಳನ್ನು ಬಿತ್ತಿತ್ತು ಎಂದು ಟೀಕಿಸಿದ್ದಾರೆ. ಇತ್ತ ಕಾಂಗ್ರೆಸ್ ನಾಯಕರು, ಗೀತೆಯ ಚರಣಗಳನ್ನು ಮಿತಿಗೊಳಿಸುವ ನಿರ್ಧಾರವನ್ನು ಮಹಾತಾಗಾಂಧಿ ಮತ್ತು ರವೀಂದ್ರನಾಥ ಟ್ಯಾಗೋರ್ ಅವರಂತಹ ರಾಷ್ಟ್ರನಾಯಕರು ಸಮಾಲೋಚನೆ ನಡೆಸಿಯೇ ತೆಗೆದುಕೊಂಡಿದ್ದರು ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ.

# ಸೇವೆ, ನಾಯಕತ್ವ ಮತ್ತು ತಂತ್ರಜ್ಞಾನ ಶಿಕ್ಷಣಕ್ಕೆ ಬಸವಚೇತನದಲ್ಲಿ ವಿಶೇಷ ಒತ್ತು

❑ ನೈಜ್ಯ ದೆಸೆ ನ್ಯೂಸ್

**ತುರವಿಹಾಳ: ವಿದ್ಯಾರ್ಥಿಗಳು ನಾಯಕತ್ವವನ್ನು ಅಧಿಕಾರದ ಪ್ರತೀಕವಾಗಿ ಅಲ್ಲ, ಸಮಾಜ ಸೇವೆ, ಕರ್ತವ್ಯನಿಷ್ಠೆ ಹಾಗೂ ಜವಾಬ್ದಾರಿಯುತ ನಡೆ-ನುಡಿಯ ಮೂಲಕ ವ್ಯಕ್ತಪಡಿಸಬೇಕು ಎಂದು ತುರವಿಹಾಳ ಪಟ್ಟಣ ಪಂಚಾಯಿತಿ ಅಧ್ಯಕ್ಷ ಬಾಪುಗೌಡ ದೇವರಮನಿ ಹೇಳಿದರು.**

ಅವರು ಶ್ರೀಮತಿ ಬಸಮ್ಮ ಅಮರಣ್ಣ ಕೆಲ್ಲೂರು ಮೆಮೋರಿಯಲ್ ಟ್ರಸ್ಟ್ (ರಿ.) ವತಿಯಿಂದ ನಡೆಸಲ್ಪಡುವ ಬಸವಚೇತನ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ 2026?27ನೇ ಸಾಲಿನ ವಿದ್ಯಾರ್ಥಿ ಸಂಸತ್ ಉದ್ಘಾಟನೆ, ನೂತನ ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ಘಟಕದ ಪ್ರಾರಂಭ ಹಾಗೂ ಆಧುನಿಕ ಕಂಪ್ಯೂಟರ್ ಲ್ಯಾಬ್ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ವಿದ್ಯಾರ್ಥಿ ಸಂಸತ್ತಿಗೆ ಚಾಲನೆ ನೀಡಿ, ನೂತನವಾಗಿ ಆಯ್ಕೆಯಾದ ವಿದ್ಯಾರ್ಥಿ ಪ್ರತಿನಿಧಿಗಳಿಗೆ ಪ್ರಮಾಣವಚನ ಬೋಧಿಸಿ ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿಯೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದು ಅತ್ಯಂತ ಮುಖ್ಯ. ಶಿಸ್ತು, ಪ್ರಾಮಾಣಿಕತೆ, ಸಮಯಪಾಲನೆ, ಸೇವಾ ಮನೋಭಾವ ಹಾಗೂ ಸಾಮಾಜಿಕ ಕಳಕಳಿಯನ್ನು ಅಳವಡಿಸಿಕೊಂಡ




ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉತ್ತಮ ನಾಗರಿಕರಾಗಿ ರೂಪುಗೊಳ್ಳುತ್ತಾರೆ. ಶಿಕ್ಷಣದ ಜೊತೆಗೆ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಮಾದರಿಯಾಗಬೇಕು ಎಂದು ಅವರು ಕರೆ ನೀಡಿದರು.ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬೆಳೆಸಲು ಹಾಗೂ ಜವಾಬ್ದಾರಿಯುತ ನಾಯಕತ್ವವನ್ನು ರೂಪಿಸಲು ವಿದ್ಯಾರ್ಥಿ ಸಂಸತ್ ಅತ್ಯುತ್ತಮ ವೇದಿಕೆಯಾಗಿದೆ. ಬಸವಚೇತನ ಶಿಕ್ಷಣ ಸಂಸ್ಥೆ ಈ ನಿಟ್ಟಿನಲ್ಲಿ ಕೈಗೊಂಡಿರುವ ಕಾರ್ಯ ಶ್ಲಾಘನೀಯವಾಗಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದೊಂದಿಗೆ ವ್ಯಕ್ತಿತ್ವ ವಿಕಸನಕ್ಕೂ ಆದ್ಯತೆ ನೀಡುತ್ತಿರುವುದು ಸಂತಸದ ವಿಷಯ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಖಾದರ್ ಭಾಷೆ, ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಪರಿಸರ ಸಂರಕ್ಷಣೆ, ಆರೋಗ್ಯ ಜಾಗೃತಿ, ಸ್ವಚ್ಛತೆ, ಸಾಮಾಜಿಕ ಬದ್ಧತೆ ಹಾಗೂ ರಾಷ್ಟ್ರಪ್ರೇಮವನ್ನು ಬೆಳೆಸುವ ಪ್ರಮುಖ ವೇದಿಕೆಯಾಗಿದೆ ಎಂದರು. ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆ ಬೆಳೆಸುವ ಉದ್ದೇಶದಿಂದ ಎನ್.ಎಸ್.ಎಸ್. ಘಟಕ ಆರಂಭಿಸಿರುವುದು ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ನೂತನ ಕಂಪ್ಯೂಟರ್ ಲ್ಯಾಬ್ ಉದ್ಘಾಟಿಸಿದ ಕ್ಷೇತ್ರ ಸಮನ್ವಯ ಅಧಿಕಾರಿ ಬಸವರಾಜ ಆನೆಗುಂದಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಡಿಜಿಟಲ್ ಕೌಶಲ್ಯಗಳು ಅನಿವಾರ್ಯವಾಗಿವೆ. ಕಂಪ್ಯೂಟರ್ ಜ್ಞಾನವಿಲ್ಲದೆ ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸುವುದು ಕಷ್ಟ. ವಿದ್ಯಾರ್ಥಿಗಳು ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಂಡು ಉನ್ನತ ಶಿಕ್ಷಣ, ಸಂಶೋಧನೆ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂದು ತಿಳಿಸಿದರು. ಆಧುನಿಕ ಶಿಕ್ಷಣ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ವಿದ್ಯಾರ್ಥಿಗಳನ್ನು ಭವಿಷ್ಯದ ಅಗತ್ಯಗಳಿಗೆ ಸಜ್ಜುಗೊಳಿಸುತ್ತಿರುವ ಬಸವಚೇತನ ಶಿಕ್ಷಣ ಸಂಸ್ಥೆಯ ಕಾರ್ಯ ಶ್ಲಾಘನೀಯವಾಗಿದೆ ಎಂದರು. ಕಾಲೇಜಿನ ಪ್ರಾಂಶುಪಾಲ ವಿರೂಪಾಕ್ಷಪ್ಪ ಗಚ್ಚಿನಮನಿ ಪ್ರಾಸ್ತಾವಿಕವಾಗಿ ಮಾತನಾಡಿ,

ಸಂಸ್ಥೆಯ ಶೈಕ್ಷಣಿಕ ಸಾಧನೆಗಳು, ಫಲಿತಾಂಶಗಳು ಹಾಗೂ ಮುಂಬರುವ ದಿನಗಳಲ್ಲಿ ಕೈಗೊಳ್ಳಲಿರುವ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ವಿವರಿಸಿದರು. ಸಂಸ್ಥೆಯ ಅಧ್ಯಕ್ಷ ಕರಕಪ್ಪ ಸಾಹುಕಾರ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಸಾಹುಕಾರ ಸಸಿಗೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಖಜಾಂಚಿ ಬಸವರಾಜ, ಅಶ್ವಮೇಧ ಎಂಟರ್ಪ್ರೈಸಸ್‌ನ ಮಂಜುನಾಥ, ಕಸಾಪ ಹೋಬಳಿ ಘಟಕದ ಅಧ್ಯಕ್ಷ ಕನಕರಾಯ ಆನೆಗುಂದಿ, ಶಿಕ್ಷಕ ನಾಗರಾಜ ಮಸ್ಕಿ, ಕಾಲೇಜಿನ ವಿದ್ಯಾರ್ಥಿ ಪ್ರತಿನಿಧಿ ಉಷಮ್ಮ ಹಾಗೂ ಪ್ರೌಢಶಾಲೆಯ ವಿದ್ಯಾರ್ಥಿ ಪ್ರತಿನಿಧಿ ಬೀರ್ಲಿಂಗ ಉಪಸ್ಥಿತರಿದ್ದರು. ಉಪನ್ಯಾಸಕ ಪಾಲಾಕ್ಷಯ್ಯ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು. ಲಕ್ಷ್ಮೀಬಾಯಿ ಸ್ವಾಗತಿಸಿದರು. ವಿದ್ಯಾರ್ಥಿಗಳು ಪ್ರಾರ್ಥನೆ ಸಲ್ಲಿಸಿದರು. ಮಣಿಕಂಠ ಬಹುಮಾನ ವಿತರಣಾ ಕಾರ್ಯಕ್ರಮ ನಡೆಸಿಕೊಟ್ಟರು. ವಿಜಯಲಕ್ಷ್ಮಿ ವಂದಿಸಿದರು.

ಕಾರ್ಯಕ್ರಮದಲ್ಲಿ ಶಾಲೆ ಹಾಗೂ ಕಾಲೇಜಿನ ಬೋಧಕ-ಬೋಧಕೇತರ ಸಿಬ್ಬಂದಿ, ಪಾಲಕರು, ಹಳೆಯ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿಯಾದರು. ವಿದ್ಯಾರ್ಥಿ ಸಂಸತ್, ಎನ್.ಎಸ್.ಎಸ್. ಘಟಕ ಮತ್ತು ಕಂಪ್ಯೂಟರ್ ಲ್ಯಾಬ್ ಆರಂಭದ ಮೂಲಕ ಸಂಸ್ಥೆಯು ಗುಣಮಟ್ಟದ ಶಿಕ್ಷಣ, ಸಾಮಾಜಿಕ ಸೇವೆ ಮತ್ತು ತಂತ್ರಜ್ಞಾನಾಧಾರಿತ ಕಲಿಕೆಗೆ ಹೊಸ ಆಯಾಮ ನೀಡಿದೆ ಎಂದು ಅಭಿಪ್ರಾಯ ವ್ಯಕ್ತವಾಯಿತು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಛಾಯಾಗ್ರಹಣ (Photography)

ಛಾಯಾಗ್ರಹಣ (Photography) ವೃತ್ತಿಯಲ್ಲಿ ಆಸಕ್ತಿ ಹೊಂದಿರುವವರಿಗೆ ಮೂಲಭೂತ (Basic) ತರಬೇತಿಯಿಂದ ಹಿಡಿದು ವೃತ್ತಿಪರ (Professional) ಡಿಪ್ಲೊಮಾವರೆಗೆ ಹಲವು ಕೋರ್ಸ್‌ಗಳು ಲಭ್ಯವಿವೆ. 12ನೇ ತರಗತಿಯ ನಂತರ ಃಈಂ ಅಥವಾ ಡಿಪ್ಲೊಮಾ ಮಾಡಬಹುದು. ಹೆಚ್ಚುವರಿಯಾಗಿ, ಮೊಬೈಲ್ ಫೋಟೋಗ್ರಫಿ, ವೆಡ್ಡಿಂಗ್ ಫೋಟೋಗ್ರಫಿ ಮತ್ತು ಆನ್‌ಲೈನ್ ತರಗತಿಗಳು ಕನ್ನಡದಲ್ಲೂ ಲಭ್ಯವಿವೆ. ಕೋರ್ಸ್ ಪ್ರಕಾರಗಳುಪ್ರಮಾಣಪತ್ರ ಕೋರ್ಸ್ (Certificate in Photography): 3 ರಿಂದ 6 ತಿಂಗಳ ಅವಧಿ. ಕ್ಯಾಮೆರಾ ಸೆಟ್ಟಿಂಗ್ಸ್, ಲೈಟಿಂಗ್ ಮತ್ತು ಎಡಿಟಿಂಗ್ ಕಲಿಯಬಹುದು. ಡಿಪ್ಲೊಮಾ (Diploma in Photography): 1 ರಿಂದ 2 ವರ್ಷದ ಅವಧಿ. ಕಮರ್ಷಿಯಲ್ ಮತ್ತು ಫ್ಯಾಷನ್ ಫೋಟೋಗ್ರಫಿ ತರಬೇತಿ.ಸ್ಮಾರ್ಟ್‌ಫೋನ್ ಕೋರ್ಸ್‌ಗಳು: ಮೊಬೈಲ್‌ನಲ್ಲಿಯೇ ಉತ್ತಮ ಫೋಟೋ ತೆಗೆಯುವುದು ಹೇಗೆ ಎಂದು ಕಲಿಯಲು.ಪ್ರಮುಖ ಸಂಸ್ಥೆಗಳುಆನ್‌ಲೈನ್ ತರಬೇತಿ: ರೋರಿಂಗ್ ಫಿಲ್ಮ್ ಸ್ಕೂಲ್ ಮತ್ತು ಲೈಫ್ ಅಂಡ್ ಲೈಫ್ ಅಕಾಡೆಮಿಯ ಮೂಲಕ ಕನ್ನಡದಲ್ಲಿ ಕಲಿಯಬಹುದು.ಬೆಂಗಳೂರು (Classroom): ಬೆಂಗಳೂರಿನಲ್ಲಿರುವ ಶ್ರೀನಿ ಇನ್‌ಸ್ಟಿಟ್ಯೂಟ್, ಫ್ಲಕ್ಸ್, ಮತ್ತು ಲಿಸಾ ಸ್ಕೂಲ್ ಆಫ್ ಡಿಸೈನ್ ನಲ್ಲಿ ನೇರ ತರಬೇತಿ ಲಭ್ಯವಿದೆ.ಕಲಿಕೆಯ ವಿಷಯಗಳುಕ್ಯಾಮರಾ ಹಾರ್ಡ್‌ವೇರ್ ಮತ್ತು ಸೆಟ್ಟಿಂಗ್ಸ್: ಲೆನ್ಸ್, ಅಪರ್ಚರ್ (f-stop), ಶಟರ್ ಸ್ಪೀಡ್ ಮತ್ತು ಋಖಔ.ಬೆಳಕಿನ ನಿಯಂತ್ರಣ: ನೈಸರ್ಗಿಕ ಮತ್ತು ಸ್ಟುಡಿಯೋ ಲೈಟಿಂಗ್ ಬಳಕೆ.ಸಾಫ್ಟ್‌ವೇರ್: ಅಡೋಬ್ ಫೋಟೋಶಾಪ್ ಮತ್ತು ಲೈಟ್‌ರೂಮ್ ಮೂಲಕ ಫೋಟೋ ಎಡಿಟಿಂಗ್.ವಿಷಯಾಧಾರಿತ ಚಿತ್ರೀಕರಣ: ಭಾವಚಿತ್ರ (Portrait), ಉತ್ಪನ್ನ (Product), ಮತ್ತು ಆಹಾರ (Food) ಚಿತ್ರೀಕರಣ.

## ಶ್ರೀ ಗ್ರಾಮದೇವತೆ ಜಾತ್ರಾ ಮಹೋತ್ಸವ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ:ಪಟ್ಟಣದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯಲಿರುವ ಶ್ರೀ ದ್ಯಾಮವ್ವ ತಾಯಿಯ ಜಾತ್ರಾ ಮಹೋತ್ಸವವು ಜುಲೈ 17 ರಿಂದ ಆರಂಭವಾಗಿದ್ದು ಜಾತ್ರೆಯ ಎರಡನೇ ದಿನವಾದ ಶನಿವಾರದಂದು ಶ್ರೀ ದುರ್ಗಾದೇವಿ ಗೀಗಿ ಗಾಯನ ಸಂಘ ಗೋಲಬಾವಿ ಮತ್ತು ಶ್ರೀ ಹುಲಿ ಕಾಂತೇಶ್ವರ ಹರದೇಶಿ ಗೀಗಿಪದ ಕಲಾ ಮೇಳ ಕಣದಾಳ ಇವರಿಂದ ಗೀಗಿ ಪದಗಳ ಕಾರ್ಯಕ್ರಮ ಹಮಿಕೊಳಲಾಯಿತು.



ಗೀಗಿ ಪದ ಗಾಯಕರು ಸೇರಿದ ಭಕ್ತರನ್ನು ರಂಜಿಸಿದರು. ಬೆಳಿಗ್ಗೆಯಿಂದಲೇ ಸಾವಿರಾರು ಭಕ್ತರು ದ್ಯಾಮವ್ವ ತಾಯಿಯ ದರ್ಶನ ಪಡೆದರು. ಎಲ್ಲ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ಬೇರೆ ಬೇರೆ ಸ್ಥಳಗಳಿಂದ ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಂಡು ಸಕಲ ವ್ಯವಸ್ಥೆ ಮಾಡಿದ ಜಾತ್ರಾ ಸಮಿತಿಯ ಪದಾಧಿಕಾರಿಗಳ ನಿಸ್ವಾರ್ಥ ಸೇವೆಗೆ ಭಕ್ತಾದಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಕಾರುಣ್ಯ ಆಶ್ರಮಕ್ಕೆ ಕುಷ್ಟಗಿ ಶಾಸಕ ದೊಡ್ಡನಗೌಡ ಪಾಟೀಲ್ ಭೇಟಿ ಹಣ್ಣು ಹಂಪಲು ವಿತರಣೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕುಷ್ಟಗಿ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ಸರ್ಕಾರದ ವಿಧಾನಸಭೆಯ ಮುಖ್ಯ ಸಚೇತಕರಾದ ದೊಡ್ಡನಗೌಡ ಪಾಟೀಲ್ ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಭೇಟಿ ನೀಡಿ ಆಶ್ರಯದಾತರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಎಲ್ಲರ ಪರಿಚಯವನ್ನು ಮಾಡಿಕೊಂಡು ಆತ್ಮಸ್ಥೈರ್ಯ ತುಂಬಿ ಮಾನವೀಯತೆ ಮೆರೆದರು.**

ಈ ಸಮಯದಲ್ಲಿ ಆಶ್ರಮದವತಿಯಿಂದ ಶಾಸಕರಾದ ದೊಡ್ಡನಗೌಡ ಪಾಟೀಲ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ನಂತರ ಕರ್ನಾಟಕ ಸರ್ಕಾರದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ವಿಧಾನಸಭಾ ಕ್ಷೇತ್ರದ ಶಾಸಕರಾದ ದೊಡ್ಡನಗೌಡ ಪಾಟೀಲ್ ಮಾತನಾಡಿ ಇಂದು ಪವಿತ್ರ ದೇವಾಲಯದಂತಿರುವ ಕಾರುಣ್ಯ ಆಶ್ರಮಕ್ಕೆ ಬಂದಿದ್ದು ನನ್ನ ಜನ್ಮ ಸಾರ್ಥಕವಾಗಿದೆ ಅಂದುಕೊಳ್ಳುತ್ತೇನೆ. ನಾನು ಅದೆಷ್ಟೋ




ಅನಾಥಾಶ್ರಮಗಳನ್ನು ವೃದ್ಧಾಶ್ರಮಗಳನ್ನು ನೋಡಿದ್ದೇನೆ ಆದರೆ ನಮ್ಮ ಸಿಂಧನೂರಿನ ಈ ಕಾರುಣ್ಯ ಆಶ್ರಮವು ಕರುಣೆಯ ಮಂದಿರವಾಗಿದೆ.

ನಮ್ಮ ಈ ಸಿಂಧನೂರಿನ ಕಾರುಣ್ಯಾಶ್ರಮದ ಸೇವೆ ಪವಿತ್ರವಾದ ಕಾರ್ಯ ಈ ಭೂಮಿ ತಾಯಿ ಕೆಲಸಕ್ಕೆ ನಾನು ಸದಾ ಜೊತೆಗಿರುತ್ತೇನೆ. ಸರ್ಕಾರದ ಯಾವುದೇ ಅನುದಾನವಿಲ್ಲದೇ ಮಾಡುತ್ತಿರುವ ಈ ಸೇವಾ ಕಾರ್ಯ ಮತ್ತು ಇಂತಹ ಕಾರ್ಯಕ್ಕೆ ಸಹಾಯ ಸಹಕಾರ ಮಾಡುತ್ತಿರುವ ದಾನಿಗಳ ಜನ್ಮ ಸಾರ್ಥಕವಾಗುತ್ತದೆ. ಮತ್ತು ವಿಶೇಷವಾಗಿ ನಮ್ಮ ಕುಷ್ಟಗಿಯ ಗುರುಗಳಾದ ರವಿಕುಮಾರ ಅಜ್ಜನವರ ಕಾಣದ ಈ ಸೇವೆ ನಮ್ಮ ಘನತೆ ಗೌರವವನ್ನು ಕೂಡ ಹೆಚ್ಚಿಸಿದೆ.ಈ ನಮ್ಮ ಕಾರುಣ್ಯಾಶ್ರಮದ ಆಶ್ರಯದಾತರುಗಳನ್ನು ನೋಡಿದರೆ ಮನಸ್ಸಿನಲ್ಲಿ ಮರುಕ ಉಂಟಾಗುತ್ತದೆ.

ರಾಜ್ಯದ ವಿವಿಧ ಜಿಲ್ಲೆಯಿಂದ ನೆಲೆ ಇಲ್ಲದ ಹಿರಿಯರನ್ನು ಹಾಗೂ ಬುದ್ಧಿಮಾಂದ್ಯರನ್ನು ಕರೆತಂದು ಚನ್ನಬಸವ ಸ್ವಾಮಿಯವರು ತಮ್ಮ ತಂದೆಯವರಾದ ಅಮರಯ್ಯ ಸ್ವಾಮಿಯವರ ಮಾರ್ಗದರ್ಶನದಲ್ಲಿ ಮಾಡುತ್ತಿರುವ. ಈ ಸೇವಾ ಕಾರ್ಯಕ್ಕೆ ಪ್ರತಿಯೊಬ್ಬರೂ ಕೂಡ ಕೈಜೋಡಿಸಬೇಕು. ಅಂದಾಗ ಮಾತ್ರ ಮಾನವ ಬದುಕು ಸಾರ್ಥಕವಾಗುತ್ತದೆ. ಮುಂದಿನ ದಿನಮಾನಗಳಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಈ ಸಂಸ್ಥೆಗೆ ಸ್ವಂತ ಜಾಗ ಹಾಗೂ ಅನುದಾನ ಕಲ್ಪಿಸುವಲ್ಲಿ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಆಶ್ರಮದ ಯಾವುದೇ ಕಷ್ಟಗಳಿಗೆ ನನ್ನನ್ನು ಸಂಪರ್ಕಿಸಿದರೆ ನಾನು ನೆರವಾಗುತ್ತೇನೆ ಎಂದು ಭಾವನಾತ್ಮಕವಾಗಿ ಮಾತನಾಡಿ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಈ ಸಮಯದಲ್ಲಿ ಸಿಂಧನೂರಿನ ಶ್ರೀ ಶಾಂಭವಿ ಪುಣ್ಯಾಶ್ರಮದ ಪೀಠಾಧಿಪತಿಗಳಾದ ವೇ. ಮೂ.ವೀರೇಶ ಯಡಿಯೂರುಮಠ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಸದಸ್ಯರು ಕಾರುಣ್ಯ ಆಶ್ರಮ. ಮಂಜು ಕೊರಡಕೇರಾ. ಮಲ್ಲಿಕಾರ್ಜುನ. ಶರಣಪ್ಪ ನಾಯಕ ಕಸಬಾ ಲಿಂಗಸೂಗೂರು. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ.ಜ್ಯೋತಿ. ಹಾಗೂ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಇಡಪನೂರು ಪಿಎಸ್‌ಐ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಕಾನೂನು ಅರಿವು, ಸುರಕ್ಷತೆ ಕುರಿತು ಜಾಗೃತಿ

ನೈಜ್ಯ ದೆಸೆ ನ್ಯೂಸ್

**ಇಡಪನೂರು: ವಿದ್ಯಾರ್ಥಿಗಳಲ್ಲಿ ಕಾನೂನಿನ ಅರಿವು ಮೂಡಿಸುವುದು, ಅವರ ಸಮಸ್ಯೆಗಳನ್ನು ಆಲಿಸಿ ಪರಿಹಾರಕ್ಕೆ ಸ್ಪಂದಿಸುವುದು ಹಾಗೂ ಸುರಕ್ಷಿತ ಶೈಕ್ಷಣಿಕ ವಾತಾವರಣ ನಿರ್ಮಿಸುವ ಉದ್ದೇಶದಿಂದ ಇಡಪನೂರು ಪೊಲೀಸ್ ಠಾಣೆಯ ಪಿಎಸ್‌ಐ ಅವರು ಇಂದು ಠಾಣಾ ವ್ಯಾಪ್ತಿಯ ಇಡಪನೂರು ಮತ್ತು ಗುಂಡ್ರವೇಲಿ ಗ್ರಾಮಗಳಲ್ಲಿರುವ ವಿದ್ಯಾರ್ಥಿ ವಸತಿ ನಿಲಯಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.**

ಭೇಟಿಯ ವೇಳೆ ಹಾಸ್ಟೆಲ್‌ಗಳ ಸ್ವಚ್ಛತೆ, ವಿದ್ಯಾರ್ಥಿಗಳ ವಸತಿ ವ್ಯವಸ್ಥೆ, ಕುಡಿಯುವ ನೀರು, ವಿದ್ಯುತ್, ಶೌಚಾಲಯಗಳ ನಿರ್ವಹಣೆ, ಆಹಾರದ ಗುಣಮಟ್ಟ, ಆರೋಗ್ಯ ಸೌಲಭ್ಯ, ಭದ್ರತಾ ವ್ಯವಸ್ಥೆ ಸೇರಿದಂತೆ ವಿವಿಧ ಮೂಲಸೌಕರ್ಯಗಳ ಬಗ್ಗೆ ಮಾಹಿತಿ ಪಡೆದು ವಿದ್ಯಾರ್ಥಿಗಳೊಂದಿಗೆ ಮುಕ್ತವಾಗಿ ಸಂವಾದ ನಡೆಸಿದರು. ವಿದ್ಯಾರ್ಥಿಗಳು ತಮ್ಮ



ಶೈಕ್ಷಣಿಕ ಹಾಗೂ ವೈಯಕ್ತಿಕ ಸಮಸ್ಯೆಗಳನ್ನು ಹಂಚಿಕೊಂಡಿದ್ದು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಅವುಗಳ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಪಿಎಸ್‌ಐ ಅವರು ವಿದ್ಯಾರ್ಥಿಗಳಿಗೆ ಭಾರತೀಯ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೆ ನೀಡಿರುವ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ತಿಳಿಸಿ, ಕಾನೂನನ್ನು ಗೌರವಿಸುವ ಮನೋಭಾವವನ್ನು ಬೆಳೆಸಿಕೊಳ್ಳುವಂತೆ ಸಲಹೆ ನೀಡಿದರು.

ಪೋಕ್ಸೊ (ಕಔಅಖಔ) ಕಾಯ್ದೆ,



ಬಾಲ್ಯವಿವಾಹ ನಿಷೇಧ ಕಾಯ್ದೆ, ಮಹಿಳಾ ಮತ್ತು ಮಕ್ಕಳ ಸುರಕ್ಷತೆ, ಸೈಬರ್ ಅಪರಾಧಗಳ ತಡೆ, ಮಾದಕ ವಸ್ತುಗಳ ದುಷ್ಪರಿಣಾಮ, ರ್ಯಾಗಿಂಗ್ ವಿರುದ್ಧದ ನಿಯಮಗಳು ಹಾಗೂ ರಸ್ತೆ ಸುರಕ್ಷತಾ ನಿಯಮಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು. ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯಿಂದ ಬಳಸಬೇಕು. ಅಪರಿಚಿತ ವ್ಯಕ್ತಿಗಳೊಂದಿಗೆ ವೈಯಕ್ತಿಕ ಮಾಹಿತಿ ಹಂಚಿಕೊಳ್ಳಬಾರದು. ಯಾವುದೇ ರೀತಿಯ ಬೆದರಿಕೆ, ಕಿರುಕುಳ, ವಂಚನೆ ಅಥವಾ ಅನುಮಾನಾಸ್ಪದ ಚಟುವಟಿಕೆ ಕಂಡುಬಂದರೆ ತಕ್ಷಣ ಪೊಲೀಸ್ ಇಲಾಖೆ ಅಥವಾ ಸಂಬಂಧಿತ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ಪೊಲೀಸ್ ಇಲಾಖೆ ಕೇವಲ ಕಾನೂನು ಜಾರಿಗೊಳಿಸುವ ಸಂಸ್ಥೆಯಷ್ಟೇ ಅಲ್ಲ, ಸಮಾಜದ ಪ್ರತಿಯೊಬ್ಬ ನಾಗರಿಕರ ಸುರಕ್ಷತೆ ಮತ್ತು ಹಿತಾಸಕ್ತಿಗೆ ಸದಾ ಬದ್ಧವಾಗಿದೆ. ವಿದ್ಯಾರ್ಥಿಗಳೊಂದಿಗೆ ನೇರ ಸಂವಾದ ನಡೆಸುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಬೆಳೆಸುವುದು ಹಾಗೂ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲೇ ಪರಿಹರಿಸುವುದು ಇಂತಹ ಕಾರ್ಯಕ್ರಮಗಳ ಪ್ರಮುಖ ಉದ್ದೇಶವಾಗಿದೆ ಎಂದು ಪಿಎಸ್‌ಐ ಹೇಳಿದರು. ಈ ಸಂದರ್ಭದಲ್ಲಿ ವಸತಿ ನಿಲಯಗಳ ವಾರ್ಡನ್‌ಗಳು, ಸಿಬ್ಬಂದಿ, ಪೊಲೀಸ್ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಕಲ್ಯಾಣಕ್ಕಾಗಿ ಪೊಲೀಸ್ ಇಲಾಖೆ ಕೈಗೊಂಡಿರುವ ಈ ಉಪಕ್ರಮವನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

## ಸರ್ಕಾರಿ ಶಾಲೆಯ ಮಕ್ಕಳಿಗೆ ಅವಧಿ ಮೀರಿದ ಹಾಲಿನ ಪುಡಿ ವಿತರಿಸಲಾಗುತ್ತಿದೆಯೇ..?

ನೈಜ್ಯ ದೆಸೆ ನ್ಯೂಸ್

**ರಾಯಚೂರು ಸರ್ಕಾರಿ ಶಾಲೆಯ ಮಕ್ಕಳಿಗೆ ಅವಧಿ ಮೀರಿದ ಹಾಲಿನ ಪುಡಿಯನ್ನು ವಿತರಿಸಲಾಗುತ್ತಿದೆಯೇ? ಎಂಬ ಅನುಮಾನ ಕಾಡಲಾರಂಭಿಸಿದ್ದು, ಅಧಿಕಾರಿಗಳು ಸಮರ್ಪಕ ಉತ್ತರ ನೀಡಲಾಗದೆ ಪರದಾಡುತ್ತಿದ್ದಾರೆ.**

2013ರಲ್ಲಿ ಹಾಲಿನ ಉತ್ಪಾದನೆ ಮಾರುಕಟ್ಟೆ ಬೇಡಿಕೆಗಿಂತಲೂ ಹೆಚ್ಚಾದಾಗ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರ್ಕಾರ ಕ್ಷೀರಭಾಗ್ಯ ಯೋಜನೆಯನ್ನು ರೂಪಿಸಿತ್ತು. ಹೆಚ್ಚುವರಿ ಹಾಲನ್ನು ದ್ರಾವಣ ರೂಪಕ್ಕೆ ಪರಿವರ್ತಿಸಿ, ಒಂದರಿಂದ ಹತ್ತನೇ ತರಗತಿ ಮಕ್ಕಳಿಗೆ ಆರಂಭದಲ್ಲಿ ವಾರದ ಮೂರು ದಿನ ಕೆನೆ ಭರಿತ ಬಿಸಿ ಹಾಲು ನೀಡಲಾಗುತ್ತಿತ್ತು. 2017ರಲ್ಲಿ ಅದನ್ನು ವಾರದಲ್ಲಿ 5 ದಿನಕ್ಕೆ ವಿಸ್ತರಿಸಲಾಗಿತ್ತು.

ಪ್ರತಿ ಮಗುವಿಗೂ 150ಮಿ.ಲೀ. ಹಾಲು ನೀಡಲು ಕನಿಷ್ಠ 18 ಗ್ರಾಂ. ಹಾಲಿನ ಪುಡಿಯನ್ನು ಬಳಸಲು ಸೂಚಿಸಲಾಗಿತ್ತು. ಇದರಿಂದ ಮಕ್ಕಳ ಪೌಷ್ಠಿಕಾಂಶ ಹೆಚ್ಚಾಗುವ ಜೊತೆಗೆ ಹೆಚ್ಚುವರಿ ಹಾಲಿನ ಮೌಲ್ಯವರ್ಧಿತ ಬಳಕೆಯಿಂದ ರೈತರಿಗೂ ಅನಕೂಲವಾಗುತ್ತಿತ್ತು. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಪೋಷಣ್ ಅಭಿಯಾನ ಮತ್ತು ರಾಜ್ಯ ಸರ್ಕಾರದ ಆರ್ಥಿಕ ನೆರವಿನಲ್ಲಿ ಯೋಜನೆ ಚಾಲ್ತಿಯಲ್ಲಿದೆ. ಜಿಲ್ಲಾ ಪಂಚಾಯಿತಿ ಮೇಲುಸ್ತುವಾರಿಯಲ್ಲಿ ಶಿಕ್ಷಣ ಇಲಾಖೆಯ ಅಕ್ಷರ ದಾಸೋಹ ಘಟಕ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಮಹತ್ವದ




ಈ ಯೋಜನೆಯ ಬಗ್ಗೆ ಅಧಿಕಾರಿಗಳು ಮತ್ತು ಕೆಎಂಎಫ್‌ನ ಹೊಣೆಗೇಡಿತನ ಎದ್ದು ಕಾಣುತ್ತಿದೆ.

ಕೊಪ್ಪಳದಲ್ಲಿ ದನದ ಕೊಟ್ಟಿಗೆಯಲ್ಲಿ ಕ್ಷೀರಭಾಗ್ಯ ಯೋಜನೆಯ ಹಾಲಿನ ಪುಡಿಯನ್ನು ಸಂಗ್ರಹಿಸಿರುವುದು ಇತ್ತೀಚೆಗೆ ಪತ್ತೆಯಾಗಿತ್ತು. ಅದಾದ ಬಳಿಕ ಈಗ ರಾಯಚೂರು-ದೇವದುರ್ಗದ ಜಮೀನು ಒಂದರಲ್ಲಿ 39 ಚೀಲ ಹಾಲಿನ ಪುಡಿ ದಾಸ್ತಾನು ಪತ್ತೆಯಾಗಿದೆ. 760ಕೆ.ಜಿ.ಗೂ ಅಧಿಕ ಪ್ರಮಾಣದ ಈ ಹಾಲಿನ ಪುಡಿಯನ್ನು ಸಂಗ್ರಹಿಸುತ್ತಿರುವ ಜಾಗ ಆತಂಕ ಹುಟ್ಟಿಸಿದಂತಿದೆ.

ದನದ ಮೇವು, ತುಕ್ಕು ಹಿಡಿದ ಕೃಷಿ ಪರಿಕರಗಳು ಮತ್ತು ಇತರ ತ್ಯಾಜ್ಯ ವಸ್ತುಗಳನ್ನು ಸಂಗ್ರಹಿಸಿಟ್ಟಿರುವ ಹಳೆಯ ಮುರುಕಲು ಶೆಡ್‌ನಲ್ಲಿ ಮಕ್ಕಳಿಗೆ ನೀಡಲಾಗುವ ಹಾಲಿನ ಪುಡಿಯನ್ನು ಶೇಖರಿಸಲಾಗಿದೆ. ಅದರಲ್ಲಿ ಎರಡು ಚೀಲಗಳನ್ನು ತೆರೆದು ಭಾಗಶಃ ಹಾಲಿನ ಪುಡಿಯನ್ನು ತೆಗೆದುಕೊಳ್ಳಲಾಗಿದೆ. ಆತಂಕಕಾರಿ ವಿಚಾರವೆಂದರೆ ಈ ದಾಸ್ತಾನಿನಲ್ಲಿ ಒಂದೆರಡು ಚೀಲಗಳ ಹಾಲಿನ ಪುಡಿ ಅವಧಿ ಮೀರಿರುವುದು ಕಂಡು ಬಂದಿದೆ. ನಾಲ್ಕೈದು ತಿಂಗಳಷ್ಟು ಗಡುವು ಮೀರಿದ ಹಾಲಿನ ಪುಡಿಯನ್ನು ಸಂಗ್ರಹಿಸಿಟ್ಟಿರುವುದು ತೀವ್ರ ಕುತೂಹಲ ಕೆರಳಿಸಿದೆ. ಮಕ್ಕಳಿಗೆ ಉಳಿದ ಹಾಲಿನ ಪುಡಿಯ ಜೊತೆಗೆ ಅವಧಿ ಮೀರಿದ ಹಾಲಿನ ಪುಡಿಯನ್ನು ಸೇರಿಸಿ ಪೂರೈಸಲಾಗುತ್ತಿದೆಯೇ ಎಂಬ ಅನುಮಾನಗಳು ವ್ಯಕ್ತವಾಗಿದೆ.

ಕೊಪ್ಪಳ, ರಾಯಚೂರು ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಪೌಷ್ಠಿಕತೆ ತಾಂಡವವಾಡುತ್ತಿದೆ. ಮಕ್ಕಳ ಆರೋಗ್ಯ ಸುಧಾರಣೆಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಯೋಜನೆಗಳನ್ನು ರೂಪಿಸಿ ವ್ಯವಸ್ಥೆ ಸುಧಾರಿಸಲು ಹರಸಾಹಸ ಪಡುತ್ತಿವೆ. ಆದರೆ ಕೆಳ ಹಂತದಲ್ಲಿ ಅಧಿಕಾರಿಗಳ ಉದಾಸೀನತೆ, ಬೇಜವಾಬ್ದಾರಿತನದಿಂದ ಪ್ರಮುಖವಾದ ಯೋಜನೆ ಹಳ್ಳ ಹಿಡಿಯುವಂತಾಗಿದೆ.

ಹಾಲಿನ ಪುಡಿ ಕಳಪೆ ದಾಸ್ತಾನಿನ ಬಗ್ಗೆ ತಾವು ಹೊಣೆಗಾರರಲ್ಲ ಎಂದು ಅಕ್ಷರ ದಾಸೋಹ ಯೋಜನೆಯ ಅಧಿಕಾರಿಗಳು ನುಣಚಿಕೊಳ್ಳುತ್ತಿದ್ದಾರೆ. ಹಾಲಿನ ಪುಡಿ ದಾಸ್ತಾನು ಮತ್ತು ಪೂರೈಕೆ ಕೆಎಂಎಫ್‌ನ ಜವಾಬ್ದಾರಿ. ರಾಯಚೂರು ಜಿಲ್ಲೆಯ ಶಾಲೆಗಳಿಗೆ ಪೂರೈಕೆಯಾಗಬೇಕಿದ್ದ ಹಾಲಿನ ಪುಡಿಯ ದಾಸ್ತಾನು ನೋಡಿದರೆ ತಮಗೆ ಬೇಸರವಾಗುತ್ತಿದೆ. ಇದು ಸೂಕ್ತವಾದ ಜಾಗವಲ್ಲ, ಈ ಬಗ್ಗೆ ಕೆಎಂಎಫ್ ಅಧಿಕಾರಿಗಳೇ ಉತ್ತರ ನೀಡಬೇಕಿದೆ ಎಂದು ಹೇಳಿದ್ದಾರೆ.

# ತೆಂಗಿನ ಕಾಯಿ ಬೆಲೆ ಇಳಿದರೂ ಗಗನಕ್ಕೇರುತ್ತಿದೆ ಚಿಪ್ಪಿನ ಬೆಲೆ

ನೈಜ್ಯ ದೆಸೆ ನ್ಯೂಸ್

**ಕೊರಟಗೆರೆ: ಒಂದು ತೆಂಗಿನ ಸಸಿ ನೆಟ್ಟು, ಬೆಳೆಸಿ ಪೋಷಿಸಿ ಮರವಾಗಿಸಿದರೆ ಕುಟುಂಬದ ಆರ್ಥಿಕತೆಗೆ ನೆರವಾಗುತ್ತದೆ ಎಂಬ ಮಾತು ಪ್ರಸ್ತುತ ಸಂದರ್ಭದಲ್ಲಿ ಅಕ್ಷರಸಹ ನಿಜವಾಗಿದೆ. ಒಂದು ಕಾಲದಲ್ಲಿ ಉರುವಲಿಗೆ ಅಥವಾ ತ್ಯಾಜ್ಯವಾಗಿ ಬಳಸಲಾಗುತ್ತಿದ್ದ ಕೊಬ್ಬರಿ ಚಿಪ್ಪು (ಕರಟ) ಇದೀಗ ರೈತರಿಗೆ ಉತ್ತಮ ಆದಾಯದ ಮೂಲವಾಗಿದೆ.ಎಳನೀರು, ಕೊಬ್ಬರಿ ಬೆಲೆ ಏರಿಕೆಯ ನಡುವೆಯೇ ಚಿಪ್ಪಿನ ಬೆಲೆಯೂ ಏರಿಕೆಯಾಗಿದ್ದು, ಒಂದು ಸಾವಿರ ಚಿಪ್ಪಿಗೆ 4,500 ರೂ.ಗೆ ಮಾರಾಟವಾಗುತ್ತಿದೆ. ಕೆಲ ತಿಂಗಳುಗಳಿಂದ ತೆಂಗಿನಕಾಯಿ ಬೆಲೆ ತುಸು ಕಡಿಮೆಯಾಗಿದ್ದು, ಕೊಬ್ಬರಿ ಮತ್ತು ಎಳನೀರು ಬೆಲೆ ಏರುತ್ತಲೇ ಇದೆ.**

ಕಲ್ಪತರು ನಾಡು ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ತೋವಿನಕೆರೆ ಹೋಬಳಿಯ ರೈತರೊಬ್ಬರು ತೆಂಗಿನಕಾಯಿ ಚಿಪ್ಪಿನಿಂದ ಹೆಚ್ಚು ಲಾಭ ಪಡೆಯುವ ಮೂಲಕ ಗಮನ ಸೆಳೆದಿದ್ದಾರೆ. ತುಮಕೂರು ಜಿಲ್ಲೆಯ ರೈತ ಟಿ.ಎಸ್.ಲೋಕೇಶ್ ಅವರು 6 ಸಾವಿರ ಕೊಬ್ಬರಿ ಚಿಪ್ಪುಗಳನ್ನು 27 ಸಾವಿರಕ್ಕೆ



ಮಾರಾಟ ಮಾಡಿ ಉತ್ತಮ ಲಾಭ ಗಳಿಸಿದ್ದಾರೆ. ಈ ಕುರಿತು ರೈತ ಲೋಕೇಶ್ ಮಾತನಾಡಿ, ಎಣಿಕೆ ಆಧಾರದಲ್ಲಿ ಮಾರಾಟ ಮಾಡಿದರೆ ಪ್ರತಿ ಚಿಪ್ಪಿಗೆ ಸುಮಾರು 4.50 ಸಿಗುತ್ತಿದೆ. ತೂಕದ ಆಧಾರದ ಮೇಲೆ ವ್ಯಾಪಾರಿಗಳು ಕ್ವಿಂಟಲ್‌ಗೆ 3,600 ದರ ನೀಡುತ್ತಿದ್ದಾರೆ. ಹಿಂದೆ ಏನೂ ಸಿಗದಿದ್ದರೆ ಚಿಕ್ಕನಾಯಕನಹಳ್ಳಿ ಚಿಪ್ಪೇ ಗತಿ ಎಂಬ ನಾಣ್ಣುಡಿ ಈಗ ಚಿಪ್ಪಿಗೂ ಕೂಡ ಶುಕ್ರದೆಸೆ ಬಂದಿದ್ದು, ಚಿಪ್ಪನ್ನು ಕಡೆಗಣಿಸುವಂತಿಲ್ಲ ಎಂದು ತಿಳಿಸಿದ್ದಾರೆ.

ಹೆಚ್ಚಾಗಿ ತೆಂಗು ಬೆಳೆಯುವ ನೆರೆಯ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡಿನಲ್ಲಿ ಕೊಬ್ಬರಿ ಚಿಪ್ಪಿನ ಉತ್ಪಾದನೆ ಕಡಿಮೆಯಾಗಿರುವುದು ಹಾಗೂ ಎಳನೀರು ಮತ್ತು ತೆಂಗಿನಕಾಯಿಗೆ ಉತ್ತಮ ಬೆಲೆ ದೊರೆಯುತ್ತಿರುವ ಹಿನ್ನೆಲೆಯಲ್ಲಿ ರೈತರು ಕೊಬ್ಬರಿ ಉತ್ಪಾದನೆಗೆ ಕಡಿಮೆ ಆದ್ಯತೆ ನೀಡುತ್ತಿರುವುದು ಚಿಪ್ಪಿನ ಲಭ್ಯತೆ ಕಡಿಮೆಯಾಗಲು ಕಾರಣವಾಗಿದೆ, ಇದರಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿ ಬೆಲೆ ಏರಿಕೆಯಾಗಿದೆ ಎನ್ನಲಾಗುತ್ತಿದೆ.

ಜೋನಿಗರಹಳ್ಳಿಯ ಚಿಪ್ಪು ಖರೀದಿದಾರ ಪ್ರಸಾದ್ ಮಾತನಾಡಿ, ಹಿಂದೆ ವಾರಕ್ಕೆ ಒಂದು ಟನ್ ಚಿಪ್ಪು ಖರೀದಿಸುತ್ತಿದ್ದೆವು. ಆದರೆ ಈಗ ತಿಂಗಳಿಗೆ ಒಂದು ಟನ್ ಚಿಪ್ಪು ಸಿಗುವುದೂ ಕಷ್ಟವಾಗಿದೆ. ಬೇಡಿಕೆ ಹೆಚ್ಚಿದ್ದರೂ ಪೂರೈಕೆ ಕಡಿಮೆಯಾಗಿರುವುದರಿಂದ ಬೆಲೆ ಏರಿಕೆಯಾಗುತ್ತಿದೆ ಎಂದು ಹೇಳಿದರು. ಕೊಬ್ಬರಿ ಚಿಪ್ಪಿನಿಂದ ಇದ್ದಿಲು, ಸಕ್ರಿಯ ಕಾರ್ಬನ್, ನೀರು ಶುದ್ಧೀಕರಣ ಫಿಲ್ಟರ್‌ಗಳು, ಸೌಂದರ್ಯವರ್ಧಕ ಉತ್ಪನ್ನಗಳು, ಕರಟದ ಎಣ್ಣೆ ಸೇರಿದಂತೆ ಹಲವು ಕೈಗಾರಿಕಾ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ.

ತುಮಕೂರಿನ ಸಂಸ್ಕರಣಾ ಘಟಕಗಳಲ್ಲಿ ಚಿಪ್ಪನ್ನು ಇದ್ದಿಲಾಗಿ ಪರಿವರ್ತಿಸಿ ಇತರೆ ರಾಜ್ಯಗಳಿಗೆ ಕಳುಹಿಸಲಾಗುತ್ತಿದ್ದು, ಅಲ್ಲಿಂದ ವಿವಿಧ ಕೈಗಾರಿಕೆಗಳಿಗೆ ಹಾಗೂ ವಿದೇಶಗಳಿಗೂ ರಫ್ತು ಮಾಡಲಾಗುತ್ತಿದೆ. ವ್ಯಾಪಾರಿಗಳ ಪ್ರಕಾರ ಪ್ರಸ್ತುತ ಬೇಡಿಕೆ ಹೆಚ್ಚಿದ್ದು ಪೂರೈಕೆ ಕಡಿಮೆ ಇರುವುದರಿಂದ ಕೊಬ್ಬರಿ ಚಿಪ್ಪಿನ ಬೆಲೆ ಮುಂದಿನ ದಿನಗಳಲ್ಲೂ ಏರಿಕೆಯಾಗುವ ಸಾಧ್ಯತೆ ಇದೆ. ತ್ಯಾಜ್ಯವೆಂದು ಪರಿಗಣಿಸಲಾಗುತ್ತಿದ್ದ ಕೊಬ್ಬರಿ ಚಿಪ್ಪು ಇಂದು ರೈತರಿಗೆ ಹೆಚ್ಚುವರಿ ಆದಾಯದ ಮೂಲವಾಗಿ ಪರಿಣಮಿಸಿರುವುದು ತೆಂಗು ಬೆಳೆಗಾರರಲ್ಲಿ ಸಂತಸ ಮೂಡಿಸಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101